# ಕನ್ನಡ

# ಬಾಲಭಾರತಿ

## ಒಂದನೆಯ ಇಯತ್ತೆ



- **Tele-MANAS Program**

**Tele-MANAS (Tele Mental Health Assistance and Networking Across States) (14416/ 1800-89-14416)**

Under the National Mental Health Program, the centrally sponsored scheme 'Tele-MANAS' is being implemented in the state of Maharashtra from October 2022. Under the Tele-MANAS Program, free 24 × 7 integrated and comprehensive mental health services are provided through the helpline number 14416. This includes treatment and counselling by experts for various mental problems. The information provided by you after calling the Tele-MANAS helpline remains completely confidential, so students, parents and teachers should feel free to call the helpline number and tell them about their problems and doubts and get guidance on it. Tell others to take help from this facility as well.

Tele-MANAS app has been launched by the Central Government and is also available in Marathi language. This app provides complete information about mental health. Tele-MANAS app is available free of cost.

ಈ ಪಠ್ಯಪುಸ್ತಕವನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ಪ್ರಶಿಕ್ಷಣ ಪರಿಷದ, ಮಹಾರಾಷ್ಟ್ರ, ಪುಣೆ ಇವರು ತಯಾರಿಸಿದ ಅಭ್ಯಾಸಕ್ರಮ ಮತ್ತು ಪಠ್ಯಕ್ರಮಗಳನುಸಾರ ಸಿದ್ಧಪಡಿಸಲಾಗಿದ್ದು, ಅವರ ಮೂಲಕ ಈ ಪಠ್ಯಪುಸ್ತಕದ ಪರಿಶೀಲನೆ ಮಾಡಲಾಗಿದೆ.
ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 16.04.2025 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2025-2026 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ

# ಬಾಲಭಾರತಿ

## ಒಂದನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟ್‌ಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದೃಕ್‌ಶ್ರಾವ್ಯ ಸ್ವರೂಪದಲ್ಲಿ ಅಧ್ಯಯನ-ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2025
ಪುನರ್ಮುದ್ರಣ : 2026

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ:**

ಶ್ರೀಮತಿ ಶೈಲಜಾ ದೇಶಪಾಂಡೆ (ಅಧ್ಯಕ್ಷ)
ಶ್ರೀಮತಿ ಮೀನಾಕ್ಷಿ ಹನಗಂಡಿ (ಸದಸ್ಯ)
ಶ್ರೀ. ಮಹಾದೇವ ಎಸ್. ಜಾವೀರ (ಸದಸ್ಯ)
ಶ್ರೀ. ದಯಾನಂದ ಟಿ. ಹಂಜಗಿ (ಸದಸ್ಯ)
ಶ್ರೀ. ಭೀಮಾಶಂಕರ ಎಚ್. ಸಲಗರ (ಸದಸ್ಯ)
ಶ್ರೀಮತಿ ಸುವರ್ಣಾ ವ್ಹಿ. ದೀಕ್ಷಿತ (ಸದಸ್ಯ)
ಶ್ರೀ. ಆನಂದ ಎನ್. ಭಾವಿಕಟ್ಟಿ (ಸದಸ್ಯ)
ಶ್ರೀ. ಪ್ರವೀಣ ಜಿ. ಗಿರಣಿ (ಸದಸ್ಯ)
ಡಾ. ಸದಾನಂದ ಎಂ. ಬಿಳ್ಳೂರ ಸದಸ್ಯ-ಸಚಿವರು

**ಕನ್ನಡ ಸಂಯೋಜನ ಪ್ರಮುಖರು**

ಡಾ. ಸದಾನಂದ ಎಂ. ಬಿಳ್ಳೂರ
ವಿಶೇಷಾಧಿಕಾರಿಗಳು, ಕನ್ನಡ,
ಪಾಠ್ಯಪುಸ್ತಕ ಮಂಡಳ, ಪುಣೆ-4.

**ಮುಖಪುಟ :** ಶ್ರೀ. ಬಟು ರಾಮದಾಸ ಬಾಗಲೆ

**ಚಿತ್ರಕಾರ :** ಶ್ರೀ. ಆದಿತ್ಯ ನರೇಂದ್ರ ಪರಾಡಕರ

**ಅಕ್ಷರ ಜೋಡಣೆ :** ವಿಜಯ ಆರ್ಟ ಪ್ರಿಂಟರ್ಸ್, ಪುಣೆ

**ಕಾಗದ** : 70 ಜಿ. ಎಸ್.ಎಮ್. ಕ್ರಿಮವೋವ್ಹ

**ಮುದ್ರಣಾದೇಶ :**

**ಮುದ್ರಕ :**

**ನಿರ್ಮಿತಿ:**

**ಶ್ರೀ. ಹೇಮಂತ ಬಾಬರ**
ಪ್ರ.ಮುಖ್ಯ ನಿರ್ಮಿತಿ ಅಧಿಕಾರಿ

**ಶ್ರೀ. ಶಶಾಂಕ ಕಣಿಕದಳೆ**
ನಿರ್ಮಿತಿ ಅಧಿಕಾರಿ

**ಪ್ರಕಾಶಕ :**

**ಶ್ರೀ. ಸಚಿನ ಮೆಹತಾ**
ಪ್ರ.ನಿಯಂತ್ರಕ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ
ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಪ್ರಿಯ ಮಕ್ಕಳೇ,

ನೀವು ಈ ವರ್ಷ ಒಂದನೆಯ ಇಯತ್ತೆಯಲ್ಲಿ ಬಂದಿರುವಿರಿ. ನಿಮಗೆ ಮನಃಪೂರ್ವಕ ಸ್ವಾಗತ. 'ಕನ್ನಡ ಬಾಲಭಾರತಿ' ಒಂದನೆಯ ಇಯತ್ತೆಯ ಪ್ರಥಮ ಭಾಷೆಯ ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿ ಇಡಲು ಬಹಳ ಸಂತೋಷವಾಗುತ್ತಿದೆ.

ರಾಷ್ಟ್ರೀಯ ಶಿಕ್ಷಣ ಧೋರಣೆ 2020 ಹಾಗೂ ಅದರ ಮೇಲೆ ಆಧಾರಿತ ತಳಹದಿ ಅಭ್ಯಾಸಕ್ರಮ : 2024 ಕಣ್ಣು ಮುಂದೆ ಇಟ್ಟುಕೊಂಡು ತಯಾರಿಸಲಾದ ಈ ಪಠ್ಯಪುಸ್ತಕವು ಖಂಡಿತವಾಗಿಯೂ ನಿಮಗೆ ಇಷ್ಟವಾಗುವುದು. ನಿಮಗೆ ಈ ಪಠ್ಯಪುಸ್ತಕದಿಂದ ಚಿತ್ರ ವಿವರಣೆಗಳು, ಹಾಡುಗಳು, ಕಥೆಗಳು, ಚಿತ್ರಕಥೆಗಳು, ಅಕ್ಷರಗಳು, ಸ್ವರಚಿಹ್ನೆಗಳು ಭಾಷಾ ಒಗಟುಗಳು. ಭಾಷಾ ಆಟಗಳು ಮತ್ತು ಚಟುವಟಿಕೆಗಳಂತಹ ವಿವಿಧ ಹೊಸ ವಿಷಯಗಳನ್ನು ಕಲಿಯುವಿರಿ. ಈ ಪಠ್ಯಪುಸ್ತಕವು ನಿಮ್ಮ ಭಾಷಾ ಕಲಿಕೆಯ ಅಡಿಪಾಯವನ್ನು ಬಲಪಡಿಸಲು ಮತ್ತು ಕನ್ನಡ ಭಾಷೆಯನ್ನು ಚೆನ್ನಾಗಿ ಬರೆಯಲು, ಓದಲು ಮತ್ತು ಮಾತನಾಡಲು ನಿಶ್ಚಿತವಾಗಿಯೂ ನಿಮಗೆ ಅನುಕೂಲವಾಗುವುದು. ನಿಮ್ಮ ಭಾಷಾ ಕಲಿಕೆಯನ್ನು ಆನಂದದಾಯಕ ಮತ್ತು ಆಸಕ್ತಿದಾಯಕವಾಗಿಸಲು, ಈ ಪಠ್ಯಪುಸ್ತಕದ ಆಶಯಕ್ಕೆ ಸೂಕ್ತವಾದ ಆಕರ್ಷಕ ಮತ್ತು ಸುಂದರವಾದ ಚಿತ್ರಗಳನ್ನು ಕೊಡಲಾಗಿದೆ.

ಈ ಪಠ್ಯಪುಸ್ತಕದಲ್ಲಿ ಹಲವು ಹಾಡುಗಳಿವೆ. ನೀವು ಈ ಎಲ್ಲಾ ಹಾಡುಗಳನ್ನು ಸಾಭಿನಯ ಮತ್ತು ಲಯಬದ್ಧವಾಗಿ ಹಾಡಲು ಸಾಧ್ಯವಾಗುತ್ತದೆ. ಈ ಹಾಡುಗಳನ್ನು ಹಾಡುವುದರಿಂದ ನಿಮಗೆ ತುಂಬಾ ಮನರಂಜನೆ ಸಿಗುತ್ತದೆ. ಪಠ್ಯಪುಸ್ತಕದಿಂದ ಭಾಗವಹಿಸುವಿಕೆಯ ಓದುವ ಪಾಠದ ವಿವರಣೆಗಳು, ಚಿತ್ರಕಥೆಗಳು ಮತ್ತು ವಿವಿಧ ಕಥೆಗಳನ್ನು ಕೇಳುವುದರಿಂದ ಮತ್ತು ಓದುವುದರಿಂದ ನಿಮಗೆ ಸಂತೋಷವಾಗುತ್ತದೆ. ಕಥೆಗಳನ್ನು ಕೇಳುವುದನ್ನು ಮತ್ತು ಹೇಳುವುದನ್ನು ನೀವು ಖಂಡಿತವಾಗಿಯೂ ಆನಂದಿಸುವಿರಿ. ಪಠ್ಯಪುಸ್ತಕದಲ್ಲಿರುವ ಚಿತ್ರಗಳನ್ನು ನೋಡುವಾಗ ನೀವು ಘಟನೆಗಳಲ್ಲಿ ಮುಳುಗಿ, ಅವುಗಳ ಆಧಾರದ ಮೇಲೆ ಸಾಕಷ್ಟು ಹರಟೆ ಹೊಡೆಯುವಿರಿ ಮತ್ತು ಚರ್ಚೆ ಮಾಡುವಿರಿ.

ಪಠ್ಯಪುಸ್ತಕದಲ್ಲಿ ಅಕ್ಷರ ಗುಂಪುಗಳು ಮತ್ತು ವಾಚನಪಾಠಗಳನ್ನು ಯಾವ ಪದ್ಧತಿಯಿಂದ ರಚಿಸಲಾಗಿದೆಯೋ ಅದರಿಂದ ನೀವು ಕ್ರಮೇಣ ಅಕ್ಷರಗಳು ಮತ್ತು ಸ್ವರಗಳನ್ನು ಗುರುತಿಸಲು ಪ್ರಾರಂಭಿಸುತ್ತೀರಿ. ಅದರ ಆಧಾರದ ಮೇಲೆ ನೀವು ವಾಚನಪಾಠಗಳನ್ನು ಓದಬಹುದು. ಈ ಸಚಿತ್ರವಾಚನ ಪಾಠಗಳ ರಚನೆ ಮತ್ತು ಮಂಡನೆ ನಿಮಗೆ ಖಂಡಿತವಾಗಿಯೂ ಇಷ್ಟವಾಗುತ್ತದೆ. ಅಕ್ಷರಗಳನ್ನು ಕಲಿಯುವಾಗ, ಚಿತ್ರಗಳಿಂದ ಪದಗಳನ್ನು ಗುರುತಿಸುವುದು, ಪದಗಳಲ್ಲಿ ಒಂದೇ ರೀತಿಯ ಅಕ್ಷರಗಳನ್ನು ಗುರುತಿಸುವುದು, ಅಕ್ಷರಗಳನ್ನು ತೀಡುವುದು ಮತ್ತು ಅಕ್ಷರಗಳನ್ನು ಬರೆಯುವುದು ಮುಂತಾದ ಚಟುವಟಿಕೆಗಳ ಮೂಲಕ ನೀವು ಪ್ರತಿಯೊಂದು ಅಕ್ಷರ ಮತ್ತು ಸ್ವರಚಿಹ್ನೆಯನ್ನು ಕಲಿಯಬೇಕಾಗುತ್ತದೆ. ಒಮ್ಮೆ ನೀವು ಅಕ್ಷರಗಳು ಮತ್ತು ಸ್ವರಗಳೊಂದಿಗೆ ಪರಿಚಿತರಾದ ನಂತರ, ನೀವು ಕ್ರಮೇಣ ಸಣ್ಣ ಪದಗಳನ್ನು ಬರೆಯಲು ಮತ್ತು ನಂತರ ಚಿಕ್ಕ ಚಿಕ್ಕ ವಾಕ್ಯಗಳನ್ನು ಬರೆಯಲು ಸಾಧ್ಯವಾಗುತ್ತದೆ. ಹಲವು ಪದ ಆಟಗಳನ್ನು ಸಹ ಒದಗಿಸಲಾಗಿದೆ. ಭಾಷೆಯನ್ನು ಕಲಿಯುವುದಿದೆ, ಆದರೆ ಅದನ್ನು ಅನೇಕ ಚಟುವಟಿಕೆಗಳು ಮತ್ತು ಆಟಗಳ ಮೂಲಕ.

ಪಠ್ಯಪುಸ್ತಕದಲ್ಲಿರುವ ಈ ಎಲ್ಲಾ ವಿಷಯಗಳು ನಿಮಗೆ ಭಾಷೆಯ ಪರಿಚಯ ಹೆಚ್ಚು ದೃಢವಾಗಲು ಸಹಾಯ ಮಾಡುತ್ತವೆ. ಮೊದಲ ವರ್ಷದ ಅಂತ್ಯದ ವೇಳೆಗೆ ನೀವು ನಿಶ್ಚಿತವಾಗಿಯೂ ಕನ್ನಡ ಚೆನ್ನಾಗಿ ಮಾತನಾಡಲು, ಓದಲು ಮತ್ತು ಬರೆಯಲು ಕಲಿಯುವಿರಿ. ಪ್ರಿಯ ಬಾಲಮಿತ್ರರೇ, ನೀವು ಕನ್ನಡ ಭಾಷೆಯನ್ನು ಸಂತೋಷದಿಂದ ಕಲಿಯಲಿ ಎಂದು ಆಶಿಸುತ್ತ ನಿಮ್ಮೆಲ್ಲರಿಗೆ ಮನಃಪೂರ್ವಕವಾಗಿ ಶುಭೇಚ್ಛೆ ಹೇಳುತ್ತೇನೆ.

(ಕೃಷ್ಣಕುಮಾರ ಭಾಸ್ಕರರಾವ ಪಾಟೀಲ)
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4.

ಪುಣೆ
ದಿನಾಂಕ: 30 ಎಪ್ರಿಲ 2025
ಭಾರತೀಯ ಸೌರ : ದಿನಾಂಕ 10 ವೈಶಾಖ 1947, ಅಕ್ಷಯ ತೃತೀಯಾ

# ಅಧ್ಯಯನ ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ

| CG | ಕ್ಷಮತೆಗಳು | ಅಧ್ಯಯನ ನಿಷ್ಪತ್ತಿಗಳ ಕ್ರ. | ವಿವರಣೆ | ವ್ಯಾಪ್ತಿ |
|---|---|---|---|---|
| CG 9 | C-9.1 | C-9.1.1 | ಹೆಚ್ಚು ಉದ್ದದ (4ರಿಂದ 8 ಸಾಲುಗಳ) ಹಾಡುಗಳು, ಶಿಶುಗೀತೆಗಳು , ಕವಿತೆಗಳನ್ನುಲಕ್ಷ್ಯಕೊಟ್ಟು ಕೇಳುತ್ತಾನೆ.ಅದಕ್ಕನುಸಾರ ಸಂಭಾಷಣೆ ಮಾಡುತ್ತಾನೆ. | 12,40,59,70,75 |
| | | C-9.1.2 | ದೊಡ್ಡ (10 ಸಾಲುಗಳ ಹಾಡುಗಳನ್ನು) ಕವಿತೆಗಳನ್ನು ಹಾಡುತ್ತಾನೆ ಮತ್ತು ಜೋರಾಗಿ ಪುನ: ಹಾಡಿ ತೋರಿಸುತ್ತಾನೆ. | 3,27,50 |
| | C-9.2 | C-9.2.1 | ಶಿಕ್ಷಕರ ಸಹಾಯದಿಂದ ಪ್ರಾಸ ಜೋಡಿಸುತ್ತಾನೆ. ಚಿಕ್ಕ ಚಿಕ್ಕ ಕವಿತೆಗಳನ್ನು ರಚಿಸುತ್ತಾನೆ. | 12, 26, 40, 59, 80 |
| | C-9.3 | C-9.3.1 | ಸಂಭಾಷಣೆಯಲ್ಲಿ ಭಾಗವಹಿಸುತ್ತಾನೆ. ಮಾತನಾಡಲು ತನ್ನ ಸಮಯಕ್ಕಾಗಿ ಕಾಯುತ್ತಾನೆ ಮತ್ತು ಇತರರಿಗೆ ಮಾತನಾಡಲು ಬಿಡುತ್ತಾನೆ. | 1,2,68,69 |
| | | C-9.3.2 | ತರಗತಿಯಲ್ಲಿ ಓದಿದ ಅಥವಾ ಚರ್ಚಿಸಿದ ಮಾಹಿತಿಯ ಆಶಯದೊಂದಿಗೆ ಸ್ವಂತ ಅನುಭವದಿಂದ ಪಡೆದ ಜ್ಞಾನವನ್ನು ಸಮರ್ಥವಾಗಿ ಜೋಡಿಸುತ್ತಾನೆ ಮತ್ತು ಅದರ ಬಗ್ಗೆ ಮಾತನಾಡುತ್ತಾನೆ. | 11,13,14,17,18, 25,30,31,32,38, 44,47,54,58,62 |
| | C-9.4 | C-9.4.1 | ಸರಳ ಸ್ವರೂಪದಲ್ಲಿರುವ ಅನೇಕ ಕೃತಿಗಳ ಸಮಾವೇಶವಿರುವ ಸೂಚನೆಗಳ ಪಾಲನೆ ಮಾಡುತ್ತಾನೆ (8 ರಿಂದ 9 ಸೂಚನೆಗಳನ್ನು ಒಟ್ಟಾಗಿ ಒಂದೇ ಸಮಯಕ್ಕೆ ನೀಡಿದಾಗ) | 21,45,71,75 |
| | | C-9.4.2 | ಸರಳ ಸ್ವರೂಪದ ಅನೇಕ ಕೃತಿಗಳ ಸಮಾವೇಶವಿರುವ ಸೂಚನೆ ಸ್ಪಷ್ಟವಾಗಿ ನೀಡುತ್ತಾನೆ (ಒಂದೇ ಬಾರಿಗೆ 8 ರಿಂದ 9 ಸೂಚನೆಗಳನ್ನು ಒಟ್ಟಾಗಿ ನೀಡಿದಾಗ) | 21,45,71,75 |
| | C-9.5 | C-9.5 | ಕಥೆಯ ಕಥಾವಸ್ತು ಮತ್ತು ಪಾತ್ರಗಳ ಪ್ರಯೋಜನ ತಿಳಿದುಕೊಂಡು ಸ್ಪಷ್ಟಪಡಿಸುತ್ತಾನೆ ಮತ್ತು ಕಥೆಯನ್ನು ಬೇರೆ ರೂಪದಲ್ಲೂ ಹೇಳುತ್ತಾನೆ. | 68,69,79 |
| | C-9.6 | C-9.6 | ಸರಳ ಕಥಾವಸ್ತು ಮತ್ತು ಪಾತ್ರಗಳೊಂದಿಗೆ ತನ್ನದೇ ಸ್ವಂತದ ಸಣ್ಣ ಕಥೆಗಳನ್ನು ಹೇಳುತ್ತಾನೆ. | 68,69,79 |
| | C-9.7 | C-9.7 | ಚಿತ್ರ ಮತ್ತು ಸಂದರ್ಭ ಇವುಗಳಿಗೆ ಅನುಸಾರವಾಗಿ ಅಪರಿಚಿತ ಶಬ್ದಗಳ ಅರ್ಥವನ್ನು ಊಹಿಸುತ್ತಾನೆ. | 73,74 |
| CG 10 | C-10.1 | C-10.1.1 | ಅಕ್ಷರಗಳ ಧ್ವನಿಯಿಂದ ಸ್ವರ ಹಾಗೂ ವ್ಯಂಜನಗಳ ಧ್ವನಿ ಬೇರೆ ಮಾಡುವನು. | 5, 6, 8, 10, 15, 16, 20, 22, 23, 28, 29, 35, 36, 37, 41, 42, 43, 46, 48, 55, 56, 57 |
| | | C-10.1.2 | ಶಬ್ದಗಳಿಂದ ಅಕ್ಷರಗಳ ಧ್ವನಿಯನ್ನು ಬೇರೆ ಮಾಡುವನು. | |
| | | C-10.1.3 | ಅಕ್ಷರಗಳ ಧ್ವನಿಯಿಂದ ಸ್ವರ ಹಾಗೂ ವ್ಯಂಜನಗಳ ಧ್ವನಿ ಬೇರೆ ಮಾಡುವನು. | |
| | C-10.2 | C-10.2.2 | ಸರಳ ವಿರಾಮ ಚಿಹ್ನೆಗಳನ್ನು ಗುರುತಿಸುತ್ತಾನೆ .(ಪೂರ್ಣವಿರಾಮ, ಪ್ರಶ್ನಾರ್ಥಕ ಚಿಹ್ನೆ | 51,52 |
| | C-10.3 | C-10.3.1 | ಎಲ್ಲ ಅಕ್ಷರಗಳು ಹಾಗೂ ಎಲ್ಲ ಸ್ವರ ಚಿಹ್ನೆಗಳು ಮತ್ತು ಸತತವಾಗಿ ಬಳಕೆಯಲ್ಲಿರುವ ಜೋಡಾಕ್ಷರಗಳ (ಕ್ಷ ಜ್ಞ) ಸಹಿತ ಬಹುವರ್ಣೀಯ ಶಬ್ದಗಳನ್ನು ಓದುತ್ತಾನೆ (ಜೋಡಾಕ್ಷರ ಯುಕ್ತ) | 64,66,67 |
| | | C-10.3.2 | ವರ್ಣಮಾಲೆಯಲ್ಲಿಯ ಎಲ್ಲ ಅಕ್ಷರಗಳು ಹಾಗೂ ಎಲ್ಲ ಸ್ವರ ಚಿಹ್ನೆಗಳು ಮತ್ತು ಸತತವಾಗಿ ಬಳಕೆಯಲ್ಲಿರುವ ಜೋಡಾಕ್ಷರಗಳ (ಕ್ಷ ಜ್ಞ) ಸಹಿತ ಬಹುವರ್ಣೀಯ ಶಬ್ದಗಳನ್ನು ಓದುತ್ತಾನೆ. | 68,69,73,79 |
| | | C-10.3.3 | ಸ್ವರಚಿಹ್ನೆಗಳನ್ನು ಉಪಯೋಗಿಸಿ ಸ್ವತಃ ಶಬ್ದ ಬರೆಯುವನು ಮತ್ತು ಅದರ ಮೇಲಿಂದ ವಾಕ್ಯ ಹೇಳುವನು. | 32,51,54,58,77 |
| | | C-10.3.4 | ಕಲಿತಿರುವ ಅಕ್ಷರಗಳು ಮತ್ತು ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಸ್ವತಃ ವಾಕ್ಯ ಬರೆಯುವನು. | 32,51,54,58,77 |
| | C-10.4 | C-10.4 | ಯೋಗ್ಯ ಉಚ್ಚಾರ ಧ್ವನಿ ಮತ್ತು ವಿರಾಮ ಚಿಹ್ನೆಗಳ ಸಹಿತ ಚಿಕ್ಕ ಪರಿಚ್ಛೇದ ಸರಿಯಾಗಿ ಓದುತ್ತಾನೆ. | 12, 26, 39, 49, 63, 78, 79 |

| | | | | |
|---|---|---|---|---|
| CG 10 | C-10.5 | C-10.5.1 | ದೃಕ್ ಆಶಯ ಮತ್ತು ಪಠ್ಯ ಸಮಾನವಿರುವ ಪುಸ್ತಕಗಳ ಸ್ವತಂತ್ರ ವಾಚನ ಮಾಡಲು ಪ್ರಾರಂಭ ಮಾಡುತ್ತಾನೆ. | 72,73 |
| | | C-10.5.2 | ಪುಸ್ತಕ ಏಕೆ ಇಷ್ಟವಾಗಿದೆ ? ಎಂಬುದರ ಬಗ್ಗೆ ಹೇಳುತ್ತಾನೆ. ಚಿಕ್ಕ ಪುಸ್ತಕಗಳ ನಿಯಮಿತ ವಾಚನ ಮಾಡುತ್ತಾನೆ.ಕಥೆಯಲ್ಲಿಯ ಕಥಾವಸ್ತು ಹಾಗೂ ಪಾತ್ರಗಳನ್ನು ಗುರುತಿಸುತ್ತಾನೆ. | 68, 69, 76 |
| | C-10.6 | C-10.6 | ಚಿಕ್ಕ ಚಿಕ್ಕ ಕವಿತೆಗಳನ್ನು ಓದುತ್ತಾನೆ ಮತ್ತು ಅದರ ಶಾಬ್ದಿಕ ಅರ್ಥ ಹೇಳುತ್ತಾನೆ. | 70,75,80 |
| | C-10.7 | C-10.7 | ಆಟ ಆಡುವ ಸಲುವಾಗಿ ಸುಲಭ ಸೂಚನೆಗಳನ್ನು ಓದುತ್ತಾನೆ ಮತ್ತು ಅದರಂತೆ ಗುಂಪಿನಲ್ಲಿ ಆಡುತ್ತಾನೆ. | 21, 71, 75 |
| | C-10.8 | C-10.8.1 | ಚಿತ್ರಗಳ ಯೋಗ್ಯ ಕ್ರಮ ಹಚ್ಚುತ್ತಾನೆ ಮತ್ತು ಅದರ ಜೊತೆಗೆ ಚಿಕ್ಕ ವಾಕ್ಯಗಳನ್ನು ಪಾರಂಪರಿಕ ಲಿಪಿಯಲ್ಲಿ( ವರ್ಣಮಾಲೆಯಲ್ಲಿ ಅಕ್ಷರಗಳು ಹಾಗೂ ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಬರೆಯುವನು) | 33,53 |
| | | C-10.8.2 | ಮೂರು ನಾಲ್ಕು ವರ್ಣಾಕ್ಷರಗಳಿರುವ ಶಬ್ದಗಳನ್ನು ಶ್ರುತಲೇಖನ ಮಾಡುತ್ತಾನೆ. | 49, 78 |
| | | C-10.8.3 | ವರ್ಣಮಾಲೆಯಲ್ಲಿಯ ಅಕ್ಷರಗಳ ಹಾಗೂ ಸ್ವರಚಿಹ್ನೆಗಳನ್ನು ಉಪಯೋಗ ಮಾಡಿ ಎರಡು ಮೂರು ವಾಕ್ಯಗಳ ಲೇಖನ ಸ್ವತಃ ಮಾಡುತ್ತಾನೆ. ಉದಾ: ಸ್ವಂತದ ಅನುಭವ ಅಥವಾ ಚಿತ್ರ ಅಥವಾ ವಾಕ್ಯಗಳ ವರ್ಣನೆ, ಸ್ವಂತದ ಎರಡು ಮೂರು ವಾಕ್ಯಗಳಲ್ಲಿ ಬರೆಯುತ್ತಾನೆ. | 53, 77 |
| | | C-10.8.5 | ವರ್ಗದಲ್ಲಿಯ ಬೇರೆ ವಿದ್ಯಾರ್ಥಿಗಳ ಸಲುವಾಗಿ ಸುಲಭವಾದ ಹಾಗೂ ಚಿಕ್ಕ ಸೂಚನೆಗಳನ್ನು ಬರೆಯುವನು. | 21, 71 |
| | C-10.9 | C-10.9.1 | ಪುಸ್ತಕ ಏಕೆ ಇಷ್ಟವಾಗಿದೆ ? ಎಂಬುದರ ಬಗ್ಗೆ ಹೇಳುತ್ತಾನೆ ಚಿಕ್ಕ ಪುಸ್ತಕಗಳ ನಿಯಮಿತ ವಾಚನ ಮಾಡುತ್ತಾನೆ. | 68, 69, 76 |

**''ಒಂದನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ವರ್ಷದ ಕೊನೆಯಲ್ಲಿ ಕಡಿಮೆಯೆಂದರೂ ಮೇಲೆ ಕೊಟ್ಟಿರುವಂತೆ ಅಧ್ಯಯನ ನಿಷ್ಪತ್ತಿಗಳನ್ನು ಸಾಧ್ಯ ಮಾಡುವದು ಅನಿವಾರ್ಯವಾಗಿದೆ. ಅಧ್ಯಯನ ನಿಷ್ಪತ್ತಿಯ ಮುಂದೆ ಕೊಟ್ಟಿರುವ ಪುಟಸಂಖ್ಯೆಗಳ ಹೊರತಾಗಿ ಇತರ ಪುಟಸಂಖ್ಯೆಗಳ ಮೇಲೆ ಕೊಟ್ಟಿರುವ ಆಶಯಗಳ ಮೂಲಕವೂ ಈ ಅಧ್ಯಯನ ನಿಷ್ಪತ್ತಿಗಳು ಸಾಧ್ಯವಾಗಬಹುದು.''**

## ಪಠ್ಯಪುಸ್ತಕವನ್ನು ಅವಲೋಕಿಸುವಾಗ ....

- ರಾಷ್ಟ್ರೀಯ ಶಿಕ್ಷಣ ಧೋರಣೆ 2020 ರ ಮೇಲೆ ಆಧಾರಿತವಾದ ಈ ಪಠ್ಯಪುಸ್ತಕವು ಮಕ್ಕಳ ಭಾಷಾ ಕೌಶಲ್ಯದ ವಿಕಾಸದಲ್ಲಿ ಮಹತ್ವಪೂರ್ಣ ಪಾತ್ರವಹಿಸಲಿದೆ. ಈ ಪಠ್ಯಪುಸ್ತಕವನ್ನು ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಸುಲಭಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ಮಕ್ಕಳ ಅಧ್ಯಯನ ಮತ್ತು ಅಭ್ಯಾಸದ ಹಂತಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳು ಸೇರಿಸಲಾಗಿದೆ.
- ಅಕ್ಷರ ಪರಿಚಯ: ಪಠ್ಯಪುಸ್ತಕದ ಆರಂಭದಲ್ಲಿ ವಾಚನಪೂರ್ವ ಮತ್ತು ಲೇಖನಪೂರ್ವ ತಯಾರಿಗಾಗಿ ಚಟುವಟಿಕೆಗಳನ್ನು ಕೊಡಲಾಗಿದೆ. ಮಕ್ಕಳಿಗೆ ಹೆಚ್ಚು ಪರಿಚಿತವಾಗಿರುವ ಪದಗಳು, ಅಂತಹ ಪದಗಳಲ್ಲಿರುವ ಅಕ್ಷರಗಳು ಮತ್ತು ಕೆಲವು ಸ್ವರ ಮತ್ತು ಸ್ವರ ಚಿಹ್ನೆಗಳಿಂದ ಅಕ್ಷರ ಗುಂಪನ್ನು ರಚಿಸಲಾಗಿದೆ. ಚಿತ್ರಗಳ ಮೂಲಕ ಪರಿಚಿತ ಮತ್ತು ಪರಿಚಯವಿಲ್ಲದ ಪದಗಳನ್ನು ಪರಿಚಯಿಸುವ ಮೂಲಕ, ಮಕ್ಕಳಿಗೆ ಆ ಪದಗಳಿಂದ ಅಕ್ಷರಗಳನ್ನು ಗುರುತಿಸಲು ಸಹಾಯವಾಗಲಿದೆ.
- ಚಿತ್ರ ಹರಟೆ:ಈ ಚಟುವಟಿಕೆಯಿಂದ ಮಕ್ಕಳು ಜಾತ್ರೆಯ ಚಿತ್ರವನ್ನು ಸೂಕ್ಷ್ಮ ನಿರೀಕ್ಷಣೆ ಮಾಡಿ ವಿವರಿಸುವ ಶಕ್ತಿ ಮತ್ತು ಸಂಭಾಷಣೆ ಕೌಶಲ್ಯವನ್ನು ಪಡೆದುಕೊಳ್ಳುತ್ತಾರೆ. ತಮ್ಮ ಅನುಭವ ಹಂಚಿಕೊಳ್ಳುವ ಮೂಲಕ ಭಾಷಾ ಅಭಿವ್ಯಕ್ತಿಯಲ್ಲಿಯೂ ನಿಪುಣತೆ ಗಳಿಸುತ್ತಾರೆ. ಜೊತೆಗೆ ಜಾತ್ರೆಯ ಸಾಂಸ್ಕೃತಿಕ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.
- ಶ್ರಾವ್ಯ ಶಬ್ದಗಳಿಂದ ಅಕ್ಷರ ಗುರುತಿಸುವಿಕೆ, ಅಕ್ಷರಗಳಿಂದ ಶಬ್ದಗಳ ರಚನೆ, ಪರಿಚಯಿಸಿದ ಅಕ್ಷರಗಳ ದೃಢೀಕರಣದ ಸಲುವಾಗಿ ಚಿಕ್ಕ ಚಿಕ್ಕ ವಾಚನ ಪಾಠಗಳನ್ನು ಕೊಡಲಾಗಿದೆ ಉದಾಹರಣೆ: ಮರ, ಉಪವನ, ಕವಿತೆಯ ಸಭೆ, ಹಸುವಿನ ಹಾಲು ಅವುಗಳ ಅಭ್ಯಾಸ ಮಾಡುವುದರಿಂದ ವಾಚನ ಮತ್ತು ಲೇಖನ ಕೌಶಲ್ಯಗಳ ವಿಕಾಸವಾಗಲಿದೆ.
- ಚಿತ್ರಗಳನ್ನು ನೋಡುವುದು, ಶಬ್ದಗಳನ್ನು ಕೇಳುವುದು. ಶಬ್ದಗಳನ್ನು ಹೇಳುವುದು, ಶಬ್ದಗಳನ್ನು ಓದುವುದು. ಶಬ್ದಗಳನ್ನು ಬರೆಯುವುದು, ಅರ್ಥಮಾಡಿಕೊಳ್ಳುವುದು, ಶಬ್ದ ಮತ್ತು ವಸ್ತುಗಳ ಹೊಂದಾಣಿಕೆ ಇದನ್ನು ಒಟ್ಟಾರೆಯಾಗಿ 'ಶಬ್ದಾನುಭಾವ' ಎಂದು ಕರೆಯಬಹುದು. ಈ ಪಠ್ಯಪುಸ್ತಕದಲ್ಲಿ ಸೇರಿಸಲಾದ ಪದಗಳು ಪ್ರಾತಿನಿಧಿಕವಾಗಿವೆ. ಶಿಕ್ಷಕರು ಮಕ್ಕಳಿಗೆ ವೈವಿಧ್ಯಮಯ ಶಬ್ದ ಅನುಭವಗಳನ್ನು ಒದಗಿಸುವ ನಿರೀಕ್ಷೆಯಿದೆ. ಶಬ್ದ ಅನುಭವ ಅಭ್ಯಾಸವನ್ನು ಒದಗಿಸುವಾಗ ಶಿಕ್ಷಕರು 'ನೀವು ಅರ್ಥಮಾಡಿಕೊಳ್ಳುವವರೆಗೆ ಅಭ್ಯಾಸ ಮಾಡಿ' ಎಂಬ ತತ್ವವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.
- ಕವಿತೆಗಳು: 'ಬಂತು ಬಂತು ಮಳೆ ಬಂತು', 'ಯಾರಮ್ಮ?', 'ಬಣ್ಣದ ಹಕ್ಕಿ' ಮತ್ತು 'ಚಂದಮಾಮ' 'ಪರಿಸರ ಗೀತೆ' ಎಂಬ ಕವಿತೆಗಳು ಮಕ್ಕಳ ಕಲ್ಪನಾಶಕ್ತಿಯನ್ನು ವೃದ್ಧಿಸುತ್ತವೆ.
- ಶಿಶುಗೀತೆಗಳು: 'ಕೂಗುಗಳು' 'ಪುಟ್ಟಿ ಚಿಟ್ಟಿ' 'ಥೈ ಥಕ ಥೈ' ಮತ್ತು 'ಚುಕುಬುಕು ರೈಲು' ಇವು ಮಕ್ಕಳಿಗೆ ಪರಿಸರ ಮತ್ತು ನೈತಿಕ ಮೌಲ್ಯಗಳ ಅರಿವು ಮೂಡಿಸುವುದರೊಂದಿಗೆ ಮಕ್ಕಳ ಮನೋರಂಜನೆಗೆ ಅವಕಾಶ ಮಾಡಿಕೊಡಲಾಗಿದೆ.
- ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಗಳು: ಪರಿಚಯಿಸಿದ ಅಕ್ಷರಗಳು ಮತ್ತು ಸ್ವರ ಚಿಹ್ನೆಗಳ ಸಹಾಯದಿಂದ ತಯಾರಿಸಲಾಗಿದೆ. 'ಕಾಗದದಿಂದ ವಿವಿಧ ವಸ್ತುಗಳನ್ನು ತಯಾರಿಸು' ಎಂಬ ಪಾಠವು ಮಕ್ಕಳ ಸೃಜನಶೀಲತೆಯನ್ನು ಬೆಳೆಸಲು ಸಹಾಯ ಮಾಡುತ್ತದೆ. 'ಚಿತ್ರ ನೋಡಿ ಕಥೆ ಪೂರ್ಣಗೊಳಿಸು' ಎಂಬ ಪಾಠವು ಮಕ್ಕಳ ಕಥಾ ನಿರ್ವಹಣಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ.
- ವ್ಯಾಕರಣ ಮತ್ತು ಲಿಖಿತ ಕೌಶಲ್ಯ : 'ಪೂರ್ಣ ವಿರಾಮದ ಪರಿಚಯ' ಮತ್ತು 'ಪ್ರಶ್ನೆ ಚಿಹ್ನೆಯ ಪರಿಚಯ' ಪಾಠಗಳು ಮಕ್ಕಳಿಗೆ ಲಿಖಿತ ಸಂವಹನದ ಪ್ರಾಥಮಿಕ ತತ್ವಗಳನ್ನು ಕಲಿಸುತ್ತವೆ.
- ನೈತಿಕ ಹಾಗೂ ಆರೋಗ್ಯ ಶಿಕ್ಷಣ: 'ಅಜ್ಜಿಯ ಒಗಟು' ಮಕ್ಕಳಿಗೆ ಜ್ಞಾನ ಮತ್ತು ತೀಕ್ಷ್ಣತೆ ನೀಡುವ ಪರಿಕರವಾಗಿ ಒಗಟುಗಳನ್ನು ಪರಿಚಯಿಸಲಾಗಿದೆ.'ಆರೋಗ್ಯವೇ ಭಾಗ್ಯ' ಪಾಠವು ಮಕ್ಕಳ ಆರೋಗ್ಯ ಮತ್ತು ಜೀವನಶೈಲಿ ಕುರಿತು ಅರಿವು ಮೂಡಿಸುತ್ತದೆ. 'ಪುಸ್ತಕ ಏಕೆ ಇಷ್ಟವಾಗಿದೆ?' ಎಂಬ ಅಧ್ಯಾಯವು ಓದುವಿಕೆಯನ್ನು ಉತ್ತೇಜಿಸುತ್ತದೆ.
- ವಿಭಿನ್ನ ಭಾಷೆ ಮತ್ತು ಸಾಂಸ್ಕೃತಿಕ ಅಂಶಗಳು: ಪಠ್ಯಪುಸ್ತಕದಲ್ಲಿ ವಿವಿಧ ಭಾಷೆಗಳ ಪದಗಳು ಮತ್ತು ಅಂಶಗಳು ಗೋಚರಿಸುತ್ತವೆ. ಇದರಿಂದ ಮಕ್ಕಳಿಗೆ ಭಾಷಾ ವೈವಿಧ್ಯತೆಯ ಅರಿವು ಮೂಡುತ್ತದೆ. ಗರಿ ಯಾರದು? ಎಂಬ ವಾಚನ ಪಾಠ ಮಕ್ಕಳ ಸಂಭಾಷಣೆ ಕೌಶಲ್ಯ ವಿಕಾಸ ಮಾಡುವುದಕ್ಕೆ ಅನುವು ಮಾಡಿಕೊಡುತ್ತದೆ.
- ಈ ಪಠ್ಯಪುಸ್ತಕವು ಓದು, ಬರಹ, ಕೌಶಲ್ಯಾಭಿವೃದ್ಧಿ, ಗೀತೆಗಳು, ಕಥೆಗಳು, ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡಂತೆ ಸಮಗ್ರ ಶಿಕ್ಷಣ ನೀಡಲು ವಿನ್ಯಾಸಗೊಳಿಸಲಾಗಿದೆ. ಮಕ್ಕಳ ಕಲಿಕೆಯ ಪಯಣದಲ್ಲಿ ಆಸಕ್ತಿ ಮೂಡಿಸುವಂತೆ ಈ ಪುಸ್ತಕವನ್ನು ರೂಪಿಸಲಾಗಿದೆ.

# ಅನುಕ್ರಮಣಿಕೆ


| ಅ.ಕ್ರ. | ಪಾಠದ ಹೆಸರು | ಪುಟಸಂಖ್ಯೆ |
|---|---|---|
| 1. | ಸ್ವ-ಪರಿಚಯ .................... | 1 |
| ★ | ಚಿತ್ರ ಹರಟೆ........................ | |
| 2. | ಬಂತು ಬಂತು ಮಳೆ ಬಂತು (ಕವಿತೆ) | 3 |
| ★ | ಅ, ಈ, ತ, ಸ, ಆ, ರ ಅಕ್ಷರಗಳ ಪರಿಚಯ | |
| ★ | ಇ, ಟ, ಶ, ಮ ಅಕ್ಷರಗಳ ಪರಿಚಯ | |
| 3. | ಮರ .......................... | 12 |
| ★ | ಪುಟ್ಟಿ ಚಿಟ್ಟಿ (ಶಿಶುಗೀತೆ ) | |
| 4. | ಅಜ್ಜಿಯ ಒಗಟು .................. | 13 |
| ★ | ಉ, ಗ, ಊ, ದ ಅಕ್ಷರಗಳ ಪರಿಚಯ | |
| ★ | ಯ, ನ, ವ, ಎ ಅಕ್ಷರಗಳ ಪರಿಚಯ | |
| 5. | ಕಿವಿಯಲ್ಲಿ ಹೇಳು .................. | 21 |
| ★ | ಭ, ಷ, ಏ, ಪ ಅಕ್ಷರಗಳ ಪರಿಚಯ | |
| 6. | ಉಪವನ ......................... | 26 |
| ★ | ಕೂಗುಗಳು (ಶಿಶುಗೀತೆ) | |
| 7. | ಪರಿಸರ ಗೀತೆ (ಕವಿತೆ) ............. – ಗಾಯತ್ರಿನಾಗೇಶ | 27 |
| ★ | ಬ, ಡ, ಕ, ಫ, ಐ ಅಕ್ಷರಗಳ ಪರಿಚಯ | |
| ★ | ಥೈ ಥಕ ಥೈ(ಶಿಶುಗೀತೆ) | |
| ★ | ಘ, ಠ, ಢ, ಜ, ಣ, ಒ, ಓ ಅಕ್ಷರಗಳ ಪರಿಚಯ | |
| 8. | ಕವಿತೆಯ ಸಭೆ ..................... | 39 |
| 9. | ಬಸವಣ್ಣ (ಶಿಶುಗೀತೆ) ............. | 40 |
| ★ | ಳ, ಚ, ಛ, ಹ, ಲ, ಔ ಅಕ್ಷರಗಳ ಪರಿಚಯ | |
| 10. | ಕಾಗದದಿಂದ ವಿವಿಧ ವಸ್ತುಗಳನ್ನು ತಯಾರಿಸು........................ | 45 |
| ★ | ಝ, ಥ, ಖ ಅಕ್ಷರಗಳ ಪರಿಚಯ | |
| 11. | ಹಸುವಿನ ಹಾಲು .................. | 49 |

| ಅ.ಕ್ರ. | ಪಾಠದ ಹೆಸರು | ಪುಟಸಂಖ್ಯೆ |
|---|---|---|
| 12. | ಬಣ್ಣದ ಹಕ್ಕಿ (ಕವಿತೆ) .......... – ಸಿ. ಥ. ಕಟ್ಟಿಮನಿ | 50 |
| 13. | ಪೂರ್ಣ ವಿರಾಮದ ಪರಿಚಯ | 51 |
| ★ | ಅರ್ಥಪೂರ್ಣ ವಾಕ್ಯ ತಯಾರಿಸೋಣ | |
| 14. | ಪ್ರಶ್ನೆ ಚಿಹ್ನೆಯ ಪರಿಚಯ .... | 52 |
| ★ | ಯಾರಮ್ಮ? (ಶಿಶುಗೀತೆ) | |
| 15. | ಚಿತ್ರವಾಚನ .................. | 53 |
| ★ | ಧ, ಋ, ಅಂ, ಅಃ, ಕ್ಷ, ಜ್ಞ, ಙ, ಞ ಅಕ್ಷರಗಳ ಪರಿಚಯ | |
| 16. | ಚಂದ ಚಂದ (ಶಿಶುಗೀತೆ)..... | 59 |
| 17. | ಹಸಿರೇ ಉಸಿರು ............... | 63 |
| 18. | ಗರಿ ಯಾರದು? .............. | 68 |
| 19. | ದಿವ್ಯ ಭಾರತ (ಕವಿತೆ) ......... | 70 |
| 20. | ಸೂಚನಾ ಪೆಟ್ಟಿಗೆ .............. | 71 |
| 21. | ಉದ್ಯಾನ ..................... | 72 |
| 22. | ಚುಕು ಬುಕು ರೈಲು (ಶಿಶುಗೀತೆ) ............ | 75 |
| 23. | ಪುಸ್ತಕ ಏಕೆ ಇಷ್ಟವಾಗಿದೆ ? ..... | 76 |
| 24. | ಚಿತ್ರ ನೋಡಿ ಕಥೆ ಪೂರ್ಣಗೊಳಿಸು .............. | 77 |
| 25. | ಜಾಣ ಬಾಲಕರು ............. | 78 |
| 26. | ಆರೋಗ್ಯವೇ ಭಾಗ್ಯ .......... | 79 |
| ★ | ಚಂದಮಾಮ (ಕವಿತೆ) | |

# 1. ಸ್ವ - ಪರಿಚಯ



ನಾನು ಪವನ
ನನಗೆ ಆಡಲು
ಇಷ್ಟ.



ನಾನು ಮೇರಿ
ನಾನು ಚೆನ್ನಾಗಿ
ಹಾಡುತ್ತೇನೆ.



ನಾನು ಅಕಬರ
ನನಗೆ
ಚಿತ್ರಗಳನ್ನು
ತೆಗೆಯಲು ಇಷ್ಟ.



ನಾನು ಮಧುರಾ
ನನಗೆ ನೃತ್ಯ
ಮಾಡುವುದು
ಬಲು ಇಷ್ಟ.

**ಸೂಚನೆ:** ಮಕ್ಕಳಿಗೆ ಮಾತನಾಡಲು ಪ್ರೋತ್ಸಾಹನೆ ನೀಡಿರಿ. ಮಕ್ಕಳ ಹವ್ಯಾಸಗಳ ಕುರಿತು ಚರ್ಚೆಮಾಡಿರಿ. ಉದಾ: ನಿನ್ನ ಹುಟ್ಟು ಹಬ್ಬ ಯಾವ ತಿಂಗಳಲ್ಲಿ ಬರುತ್ತದೆ? ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಮಾತನಾಡಲು ಪ್ರೋತ್ಸಾಹಿಸಿರಿ

1. ನಿನ್ನ ಹೆಸರು ಏನು?
2. ನಿನ್ನ ಮನೆಯಲ್ಲಿಯಾರು-ಯಾರು ಇರುತ್ತಾರೆ?
3. ನಿನಗೆ ಯಾವ ಆಟ ಆಡಲು ಇಷ್ಟ?
4. ನಿನಗೆ ಯಾವ ಬಣ್ಣ ಇಷ್ಟ?
5. ನೀನು ಯಾವ ಊರಿನಲ್ಲಿ ಇರುತ್ತೀಯ?
6. ನಿನಗೆ ಯಾವ ಹಣ್ಣು ಇಷ್ಟ?
7. ನೀನು ಶಾಲೆಗೆ ಹೇಗೆ ಬರುವೆ?
8. ನಿನಗೆ ಯಾವ ಪ್ರಾಣಿ ಇಷ್ಟ?

ಈ ಪ್ರಶ್ನೆಗಳು ಮಕ್ಕಳನ್ನು ಆಸಕ್ತಿಯಿಂದ ಮಾತನಾಡಿಸಲು ಸಹಾಯಮಾಡುತ್ತವೆ. ಅವರು ಹೆಚ್ಚು ಮುಕ್ತವಾಗಿ ಪ್ರತಿಕ್ರಿಯಿಸುತ್ತಾರೆ.

# ಚಿತ್ರ ಹರಟೆ




**ಸೂಚನೆ:** ಗುಂಪಿನಲ್ಲಿ ಕುಳಿತು ಜಾತ್ರೆಯ ಚಿತ್ರನೋಡಿರಿ. ನೀವು ಏನು ನೋಡುತ್ತಿದ್ದಿರಿ ಎಂಬುದನ್ನು ನಿಮ್ಮ ಗೆಳೆಯರೊಂದಿಗೆ ಹಂಚಿಕೊಳ್ಳಿರಿ ಮತ್ತು ಅದರ ಬಗ್ಗೆ ಹರಟೆ ಹೊಡೆಯಿರಿ. ಈ ಜಾತ್ರೆಗೆ ಜನರು ಏಕೆ ಬರುವರು? ಜಾತ್ರೆಯಲ್ಲಿ ನಿಮಗೆ ಏನು ಇಷ್ಟವಾಯಿತು? ಹೋದ ಸಲ ನೀವು ಯಾವ ಜಾತ್ರೆಗೆ ಹೋಗಿದ್ದಿರಿ ಮತ್ತು ಯಾರ ಜೊತೆಗೆ ಹೋಗಿದ್ದಿರಿ? ಅಲ್ಲಿ ನೀವು ಏನು ನೋಡಿದಿರಿ? ಜಾತ್ರೆಯಲ್ಲಿ ನೀವು ಏನನ್ನು ಕೊಂಡುಕೊಂಡಿರಿ? ಜಾತ್ರೆಯಲ್ಲಿ ನೀವು ಯಾವ ಆಟ ಆಡಿದಿರಿ? ಚಿತ್ರದಲ್ಲಿ ಯಾವಯಾವ ಚಟುವಟಿಕೆಗಳು ನಡೆಯುತ್ತಿವೆ? ಜಾತ್ರೆಯಲ್ಲಿ ಯಾವಯಾವ ಆಟಗಳು ಕಾಣಿಸುತ್ತಿವೆ? ಶಿಕ್ಷಕರು ಈ ಎಲ್ಲ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ವಿಚಾರಿಸಿರಿ, ಮಕ್ಕಳಿಂದ ಜಾತ್ರೆಯ ಸಂಪೂರ್ಣ ಮಾಹಿತಿಯನ್ನು ವಿಚಾರಿಸಿರಿ. ಮಕ್ಕಳು ತಮ್ಮ ಭಾಷೆಯಲ್ಲಿ ಹೇಳಲು ಅವರನ್ನು ಪ್ರೋತ್ಸಾಹಿಸಿರಿ ಮತ್ತು ಯೋಗ್ಯ ಅವಕಾಶವನ್ನು ಮಾಡಿಕೊಡಿರಿ.

# 2. ಬಂತು ಬಂತು ಮಳೆ ಬಂತು



**ಹಾಡೋಣ, ಕುಣಿಯೋಣ**

ಬಂತು ಬಂತು ಮಳೆ ಬಂತು
ಅಂಗಳವೆಲ್ಲ ನೀರಾಯ್ತು
ಗೆಳೆಯರನ್ನೆಲ್ಲ ಕರಿಯೋಣ
ಕಾಗದ ದೋಣಿಯ ಮಾಡೋಣ

ಅಂಗಳದಲ್ಲಿ ಸೇರೋಣ
ದೋಣಿಯ ತೇಲಿಸಿ ಆಡೋಣ
ದೋಣಿಯು ಹೋಯಿತು ನೀರಿನಲಿ
ಮೋಟಾರಗಾಡಿಯ ರೀತಿಯಲಿ

ಕೈ ಕೈ ಹಿಡಿದು ನಡೆಯೋಣ
ಕೇ ಕೇ ಹಾಕುತ ಕುಣಿಯೋಣ
ಬಂದಿತು ಮಳೆಯು ರಭಸದಲಿ
ದೋಣಿಯು ಮುಳುಗಿತು ನೀರಿನಲಿ

**ಸೂಚನೆ:** ಮಕ್ಕಳ ಜೊತೆಗೆ ಸಾಭಿನಯದೊಂದಿಗೆ ಕವಿತೆಯನ್ನು ಲಯಬದ್ಧವಾಗಿ ಹಾಡಿರಿ ಮತ್ತು ಹಾಡಿಸಿಕೊಳ್ಳಿರಿ. ಮಳೆಗಾಲದ ಅನುಭವಗಳನ್ನು ಹಂಚಿಕೊಳ್ಳುವ ಸಲುವಾಗಿ ಮಕ್ಕಳ ಜೊತೆಗೆ ಸಂವಾದ ರೂಪದಲ್ಲಿ ಚರ್ಚೆ ಮಾಡಿರಿ. ಉದಾ. ನೀನು ಮಳೆಗಾಲದಲ್ಲಿ ಯಾವ ಯಾವ ಆಟಗಳನ್ನು ಆಡುವೆ.

# ಅಕ್ಷರ ಅವಯವಗಳು



**ಸೂಚನೆ:** ಲೇಖನದ ಪೂರ್ವತಯಾರಿಯ ಸಲುವಾಗಿ ಮೇಲಿನ ಅಕ್ಷರ ಅವಯವಗಳನ್ನು ರೂಢಿ ಮಾಡಿಸಿಕೊಳ್ಳಿರಿ.

# ಅ, ಈ, ತ, ಸ, ಆ, ರ ಅಕ್ಷರಗಳ ಪರಿಚಯ

ತೀಡು.



ತೀಡು.



ಚಿತ್ರ ನೋಡಿ ಹೆಸರು ಹೇಳು.



ಅರಮನೆ



ಅ



ಅರಸ

ಅಮ್ಮ



ಈಜು



ಈಳಿಗೆ

ಈ



ಈರುಳ್ಳಿ

'ಅ' ಅಕ್ಷರಕ್ಕೆ ◯ ಹಾಕು

| | |
|---|---|
| ಅವನು | ಅರಸ |
| ಅವಸರ | ಅಳು |
| ಅಗಸ | ಅಕ್ಷರ |

'ಈ' ಅಕ್ಷರಕ್ಕೆ □ ಹಾಕು.

| | |
|---|---|
| ಈಶಾನ್ಯ | ಈಶ |
| ಈಳಿಗೆ | ಈಚಲ |
| ಈರ | ಈರುಳ್ಳಿ |

ತೀಡು.





ಸೂಚನೆ: ಮಕ್ಕಳಿಗೆ ಚಿತ್ರಗಳ ಸಹಾಯದಿಂದ ಅ ಮತ್ತು ಈ ಅಕ್ಷರಗಳನ್ನು ಪರಿಚಯಿಸಿರಿ.

ತೀಡು.





ಚಿತ್ರ ನೋಡಿ ಹೆಸರು ಹೇಳು.

ತ



ತಬಕ



ತಕ್ಕಡಿ



ತಬಲ

ಸ



ಸಕ್ಕರೆ



ಸನಿಕೆ



ಸರ

'ತ' ಅಕ್ಷರಕ್ಕೆ ◯ ಗೋಲು ಹಾಕು.

| | |
|---|---|
| ತಪ | ತನು |
| ಮತ | ಶತ |
| ಆತ | ತವಕ |
| ಪತನ | ಇತರ |

'ಸ' ಅಕ್ಷರಕ್ಕೆ ☐ ಹಾಕು.

| | |
|---|---|
| ಸಡಗರ | ಹೊಸ |
| ಸಹಜ | ಗರಗಸ |
| ರಸ | ವಿಕಾಸ |
| ಮೊಸಳೆ | ಅವಸರ |

ತೀಡು.

ತ ತ ತ ತ ತ ತ

ಸ ಸ ಸ ಸ ಸ ಸ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ತ' ಮತ್ತು 'ಸ' ಅಕ್ಷರಗಳನ್ನು ಪರಿಚಯಿಸಿರಿ.

ತೀಡು.



## ಚಿತ್ರ ನೋಡಿ ಹೆಸರು ಹೇಳು.


ಆನೆ

ಆ


ಆಕಳು


ಆಡು


ರಥ

ರ


ರವಿ


ರಸ್ತೆ

'ಆ' ಅಕ್ಷರಕ್ಕೆ ◯ ಹಾಕು.

| | | |
|---|---|---|
| ಆಲಯ | ಆಯತ | ಆಗ |
| ಆಮೆ | ಆಟ | ಆಕೆ |
| ಆನೆ | ಆಸರೆ | ಆಗಸ |

'ರ' ಅಕ್ಷರಕ್ಕೆ □ ಹಾಕು.

| | | |
|---|---|---|
| ರಸ | ರಜೆ | ಸರ |
| ಅದರ | ದರ | ರಮೇಶ |
| ಅಮರ | ರಭಸ | ರವಿ |

ತೀಡು.

ಆ ಆ ಆ ಆ ಆ ಆ

ರ ರ ರ ರ ರ ರ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಆ' ಮತ್ತು 'ರ' ಅಕ್ಷರಗಳನ್ನು ಪರಿಚಯಿಸಿರಿ.

ತೀಡು.



# ಇ, ಟ, ಶ, ಮ ಅಕ್ಷರಗಳ ಪರಿಚಯ

ಚಿತ್ರ ನೋಡಿ ಹೆಸರು ಹೇಳು.



ಇಟ್ಟಿಗೆ

ಇ



ಇರುವೆ



ಇಲಿ



ಟಗರು

ಟ

ಟಪಾಲು





ಗಾಳಿಪಟ

'ಇ' ಅಕ್ಷರಕ್ಕೆ ◯ ಹಾಕು.

ಇಳೆ ಇರುವೆ

ಇಯತ್ತೆ

ಇರುಳು ಇಲಾಖೆ

'ಟ' ಅಕ್ಷರಕ್ಕೆ □ ಹಾಕು.

ಟಪ ಟಪ ನಟ

ಪಟ ತಟಪಟ

ತೀಡು.





**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಇ' ಮತ್ತು 'ಟ' ಅಕ್ಷರಗಳನ್ನು ಪರಿಚಯಿಸಿರಿ.

## ಾ - ಇಳಿ

'ಾ' ಇಳಿ ಜೋಡಿಸಿ ಓದು.

| | | | | |
|---|---|---|---|---|
| ರ | + | ಾ | = | ರಾ |
| ತ | + | ಾ | = | ತಾ |
| ಸ | + | ಾ | = | ಸಾ |




ಸಾ ಸಾ ತಾ ತಾ ರಾ ರಾ

ಸಾರ ತಾರ ತಾತ

ತೀಡು ಮತ್ತು ಬಣ್ಣ ತುಂಬು.



ತೀಡು.



ಸೂಚನೆ : 'ಾ' ಇಳಿ ಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

## ಚಿತ್ರ ನೋಡಿ ಹೆಸರು ಹೇಳು.



ಶರ

ಶ



ಶಂಖ



ಶಯನ



ಮರ

ಮ



ಮಗು



ಮಳೆ

'ಶ' ಅಕ್ಷರಕ್ಕೆ ○ ಹಾಕು.

'ಮ' ಅಕ್ಷರಕ್ಕೆ □ ಹಾಕು.

| | | | |
|---|---|---|---|
| ಶರದ | | ಮನೆ | |
| ಪರವಶ | ಶಂಕರ | ರಮಣ | ಭರಮ |
| ಶರಣ | ಶಂಖ | ನಮನ | ಮರ |
| ಶತಕ | ದಶಕ | ಮಮತೆ | ಸಮರ |

ತೀಡು.

ಶ ಶ ಶ ಶ ಶ

ಮ ಮ ಮ ಮ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಶ' ಮತ್ತು 'ಮ' ಅಕ್ಷರಗಳನ್ನು ಪರಿಚಯಿಸಿರಿ.

## ಿ - ಗುಡಿಸು

' ಿ ' ಗುಡಿಸು ಜೋಡಿಸಿ ಓದು.

ತ + ಿ = ತಿ    ಮ + ಿ = ಮಿ

ಸ + ಿ = ಸಿ    ರ + ಿ = ರಿ




**ಓದು ಮತ್ತು ಬರೆ.**

ರಾಶಿ ..............................

ಸರಿ ..............................

ಸಿರಿ ..............................

ಮರಿ ..............................

## ೀ - ಗುಡಿಸಿನ ದೀರ್ಘ

' ೀ ' ಗುಡಿಸಿನ ದೀರ್ಘ ಜೋಡಿಸಿ ಓದು.

ತಿ + ೀ = ತೀ

ಸ + ೀ = ಸೀ

ಶ + ೀ = ಶೀ




ಮ + ೀ = ಮೀ

ರ + ೀ = ರೀ

**ಓದು ಮತ್ತು ಬರೆ.**

ರೀತಾ ..............................

ತೀರ ..............................

ಮೀರಾ ..............................

ಸೀಮಾ ..............................

ಶೀತ ..............................

ಸೀತಾ ..............................

ಸೀಟಿ ..............................

| ್ | ಾ | ಿ | ೀ |
|---|---|---|---|
| ರ | ರಾ | ರಿ | ರೀ |
| ಸ | ಸಾ | ಸಿ | ಸೀ |
| ತ | ತಾ | ..... | ..... |
| ಟ | ..... | ಟಿ | ..... |
| ಮ | ..... | ..... | ..... |
| ಶ | ..... | ..... | ..... |

**ಸೂಚನೆ:** ' ಿ ' – ಗುಡಿಸು ಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.
' ೀ ' – ಗುಡಿಸಿನ ದೀರ್ಘಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

ವಾಚನಪಾಠ

# 3. ಮರ



ಓದು ಮತ್ತು ಬರೆ.



ಈ ಮರ
ಇಶಾ, ರೀಟಾ, ರಾಮ, ಶಾಮರ ಮರ
ಸೀತಾ, ಸೀಮಾ, ಮಿತಾಶಾ, ಶರತರ ಮರ

| | | | | | |
|---|---|---|---|---|---|
| ಇ | ಈ | ರ | ಶ | ತ | ಮ |
| ಶಾ | ರಾ | ಟಾ | ತಾ | ಮಾ | |
| ಮಿ | ಸೀ | ರೀ | | | |



ಹಾಡು.

## ಪುಟ್ಟಿ ಚಿಟ್ಟಿ

ಇವಳ ಹೆಸರು ಪುಟ್ಟಿ
ಅವಳ ಗೆಳತಿ ಚಿಟ್ಟಿ
ಪುಟ್ಟಿ ಚಿಟ್ಟಿ ಸೇರಿಕೊಂಡು
ಹೆಣೆದರೊಂದು ಬುಟ್ಟಿ



**ಸೂಚನೆ:** ಇಲ್ಲಿಯವರೆಗೆ ಪರಿಚಯಿಸಿದ ಅಕ್ಷರಗಳ ಸಹಾಯದಿಂದ 'ಮರ' ಈ ವಾಚನ ಪಾಠ ಕೊಡಲಾಗಿದೆ. ಅಕ್ಷರಗಳ ದೃಢೀಕರಣಕ್ಕಾಗಿ ಮಕ್ಕಳಿಂದ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ.

- 'ಪುಟ್ಟಿ ಚಿಟ್ಟಿ' ಶಿಶುಗೀತೆಯನ್ನು ಸಾಭಿನಯದೊಂದಿಗೆ ಹಾಡಿಸಿರಿ.
- ಪ್ರಾಸಯುಕ್ತ ಪದಗಳನ್ನು ಪರಿಚಯಿಸಿರಿ. ಉದಾ– ಪುಟ್ಟಿ, ಚಿಟ್ಟಿ, ಬುಟ್ಟಿ.



ಒಗಟು ಬಿಡಿಸು.

# 4. ಅಜ್ಜಿಯ ಒಗಟು

ಸುಂದರಪುರ ಎಂಬ ಊರು ಇತ್ತು. ಆ ಊರಿನಲ್ಲಿ ಕುಸುಮ ಮತ್ತು ಬಸವ ಎಂಬ ಮಕ್ಕಳಿದ್ದರು. ಅವರು ತಂದೆ ತಾಯಿ, ಅಜ್ಜ ಮತ್ತು ಅಜ್ಜಿಯ ಜೊತೆಗೆ ವಾಸಿಸುತ್ತಿದ್ದರು. ಕುಸುಮ ಮತ್ತು ಬಸವ ದಿನಾಲೂ ಶಾಲೆಗೆ ಹೋಗುತ್ತಿದ್ದರು. ಶಾಲೆಯಿಂದ ಬಂದ ನಂತರ ಅವರು ತಂದೆ-ತಾಯಿಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದರು.

ಒಂದು ಸಲ ಕುಸುಮ ಮತ್ತು ಬಸವ ಅಜ್ಜಿಗೆ, ''ಅಜ್ಜಿ ನೀನು ಒಗಟನ್ನು ಹೇಳು ನಾವು ಅದನ್ನು ಬಿಡಿಸುವೆವು'' ಎಂದರು.




ಇಬ್ಬರೂ ಕೂಡಿ ಸಾಕಷ್ಟು ವಸ್ತುಗಳ ಬಗ್ಗೆ ಚರ್ಚೆ ಮಾಡಿದರು. ಆದರೆ ಅವರಿಗೆ ಏನೂ ಹೊಳೆಯಲಿಲ್ಲ. ಆಗ ಅವರಿಬ್ಬರೂ ಅಜ್ಜನಿಗೆ ಸುಳಿವು ನೀಡಲು ಕೇಳಿದರು.





ಆಗ ಕುಸುಮ ಮತ್ತು ಬಸವನಿಗೆ ತಕ್ಷಣ ಉತ್ತರ ಹೊಳೆಯಿತು.

ಇಬ್ಬರೂ ಖುಷಿಯಾಗಿ 'ಹವೆ' ಎಂದು ಜೋರಾಗಿ ಹೇಳಿದರು.






ಅಜ್ಜಿಗೆ ತುಂಬಾ ಸಂತೋಷವಾಯಿತು.



ತಂದೆಯು ಇಬ್ಬರಿಗೂ ಬೇರೆ ಬೇರೆ ಬಣ್ಣದ ಬಲೂನುಗಳನ್ನು ಕಾಣಿಕೆಯಾಗಿ ಕೊಟ್ಟನು.



ತಾಯಿಯು ಬಲೂನಿನಲ್ಲಿ ಹವೆ ತುಂಬಿ ಆಡಲು ಹೇಳಿದಳು.

**ಸೂಚನೆ:** ಮಕ್ಕಳಿಗೆ ವಿಚಾರ ಮಾಡಲು ಅವಕಾಶ ಕೊಡಬೇಕು. ಸ್ವಂತದ ವಿಚಾರ ಮಂಡಿಸಲು ಪ್ರೋತ್ಸಾಹಿಸಬೇಕು.

# ಉ, ಗ, ಊ, ದ ಅಕ್ಷರಗಳ ಪರಿಚಯ

ತೀಡು.







ಚಿತ್ರ ನೋಡಿ ಹೆಸರು ಹೇಳು.



ಉದಯ

ಉ



ಉಂಗುರ



ಉಡ



ಗರಗಸ

ಗ



ಗರುಡ



ಗಡಿಯಾರ

'ಉ' ಅಕ್ಷರಕ್ಕೆ ◯ ಹಾಕು.

ಉದಯ ಉಷಾ

ಉಮಾ ಉರಗ

'ಗ' ಅಕ್ಷರಕ್ಕೆ □ ಹಾಕು.

ಗಗನ ಗಜ

ಮಗ ಜಗ ಗಣಪ

ಗರಿ ನಗರ

ತೀಡು.

ಉ ಉ ಉ ಉ

ಗ ಗ ಗ ಗ ಗ

ಸೂಚನೆ: ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಉ' ಮತ್ತು 'ಗ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.



ಊದು

**ಊ**



ಊಟ



ಊರು




ದವಾಖಾನೆ

**ದ**



ದಸರಾ



ದನ

## 'ಊ' ಅಕ್ಷರಕ್ಕೆ ◯ ಹಾಕು.

ಊತ

ಊನ

ಊರವನ

ಊರಜನ

## 'ದ' ಅಕ್ಷರಕ್ಕೆ □ ಹಾಕು.

| | |
|---|---|
| ದರ | ಗದಗ |
| ಪದ | ಮದನ |
| ಉದರ | ಮುದ |

## ತೀಡು.

ಊ ಊ ಊ

ದ ದ ದ ದ ದ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಊ' ಮತ್ತು 'ದ' ಅಕ್ಷರಗಳನ್ನು ಪರಿಚಯಿಸಿರಿ.

# ು – ಕೊಂಬು

**‘ು’ – ಕೊಂಬು ಜೋಡಿಸಿ ಓದು.**

| | | | | | | | | | |
|---|---|---|---|---|---|---|---|---|---|
| ರ | + | ು | = | ರು | ಸ | + | ು | = | ಸು |
| ತ | + | ು | = | ತು | ಟ | + | ು | = | ಟು |
| ಗ | + | ು | = | ಗು | ಮ | + | ು | = | ಮು |
| | | | | | ಶ | + | ು | = | ಶು |






**ಓದು ಮತ್ತು ಬರೆ.**

ಮಗು ..............................

ಗುರು ..............................

ತರು ..............................

ತಾಸು ..............................

ತುಸು ..............................

| | ಾ | ಿ | ೀ | ು |
|---|---|---|---|---|
| ರ | ರಾ | ರಿ | ರೀ | ರು |
| ಸ | ಸಾ | ಸಿ | ಸೀ | ಸು |
| ತ | ತಾ | ತಿ | ತೀ | ..... |
| ಟ | ..... | ಟಿ | ..... | ..... |
| ಮ | ..... | ..... | ..... | ..... |
| ಶ | ..... | ..... | ..... | ..... |
| ಗ | ..... | ..... | ..... | ..... |

**ಸೂಚನೆ:** ‘ು’ – ಕೊಂಬು ಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

# ೂ - ಕೊಂಬಿನಿಳಿ

'ೂ' ಕೊಂಬಿನಿಳಿ ಜೋಡಿಸಿ ಓದು.

ರ + ೂ = ರೂ    ಸ + ೂ = ಸೂ
ತ + ೂ = ತೂ    ಟ + ೂ = ಟೂ
ಮ + ೂ = ಮೂ    ಶ + ೂ = ಶೂ
ಗ + ೂ = ಗೂ    ನ + ೂ = ನೂ





ತೀಡು ಮತ್ತು ಬರೆ.

ರೂ ರೂ   ಸೂ ಸೂ   ಗೂ ಗೂ
ತೂ ತೂ   ಟೂ ಟೂ   ಶೂ ಶೂ
ಮೂ ಮೂ   ನೂ ನೂ


ಓದು ಮತ್ತು ಬರೆ.

ತೂರು ..........................



ತೂಗು ..........................



ಮೂಗುತಿ ..........................



ಮೂಗು ..........................



| | ಾ | ಿ | ೀ | ು | ೂ |
|---|---|---|---|---|---|
| ರ | ರಾ | ರಿ | ರೀ | ರು | ರೂ |
| ಸ | ಸಾ | ಸಿ | ಸೀ | ಸು | ಸೂ |
| ತ | ತಾ | ...... | ...... | ...... | ...... |
| ಟ | ...... | ಟಿ | ...... | ...... | ...... |
| ಮ | ...... | ...... | ಮೀ | ...... | ...... |
| ಶ | ...... | ...... | ...... | ಶು | ...... |
| ಗ | ...... | ...... | ...... | ...... | ಗೂ |
| ದ | ...... | ...... | ...... | ...... | ...... |
| ಯ | ...... | ...... | ...... | ...... | ...... |
| ನ | ...... | ...... | ...... | ...... | ...... |

**ಸೂಚನೆ:** 'ೂ' ಕೊಂಬಿನಿಳಿ ಸ್ವರಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

ತೀಡು.

# ಯ, ನ, ವ, ಎ ಅಕ್ಷರಗಳ ಪರಿಚಯ



ಚಿತ್ರ ನೋಡಿ ಹೆಸರು ಹೇಳು.

ಯ



ಯಂತ್ರ



ಯಜ್ಞ



ಯಕ್ಷಗಾನ

ನ



ನಳ



ನರಿ



ನಗಾರಿ

'ಯ' ಅಕ್ಷರಕ್ಕೆ ◯ ಹಾಕು.

'ನ' ಅಕ್ಷರಕ್ಕೆ ☐ ಹಾಕು.

| | | | | | |
|---|---|---|---|---|---|
| ಯಶ | ಯಜಮಾನ | | ನಯನ | | ನಮನ |
| ಸಮಯ | ನಯನ | | ನಗರ | ನಳ | ಕನಕ |

ತೀಡು.

ಯ ಯ ಯ ಯ

ನ ನ ನ ನ ನ ನ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಯ' ಮತ್ತು 'ನ' ಅಕ್ಷರಗಳನ್ನು ಪರಿಚಯಿಸಿರಿ.

ತೀಡು.



ಚಿತ್ರ ನೋಡಿ ಹೆಸರು ಹೇಳು.

ವ



ವರ



ವನ



ವಹಿ

ಎ



ಎಲೆ



ಎತ್ತು



ಎಮ್ಮೆ

'ವ' ಅಕ್ಷರಕ್ಕೆ ◯ ಹಾಕು.

'ಎ' ಅಕ್ಷರಕ್ಕೆ ☐ ಹಾಕು.

| | | | |
|---|---|---|---|
| ಮಾನವ | ವನಜ | ಎರಡು | ಎಳೆ |
| ದವಸ | ವಚನ | ಎಡ | ಎರೆಹುಳ |

ತೀಡು.

ವ ವ ವ ವ ವ

ಎ ಎ ಎ ಎ ಎ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ವ' ಮತ್ತು 'ಎ' ಅಕ್ಷರಗಳನ್ನು ಪರಿಚಯಿಸಿರಿ.

# 5. ಕಿವಿಯಲ್ಲಿ ಹೇಳು

**ಸೂಚನೆ ಹೇಳು.**

ವೃತ್ತಾಕಾರದಲ್ಲಿ ವಿದ್ಯಾರ್ಥಿಗಳು ನಿಂತರು. ನಂತರ ಒಬ್ಬನು ಇನ್ನೊಬ್ಬನಿಗೆ ವಿವಿಧ ಚಟುವಟಿಕೆಗಳನ್ನು ಮಾಡಲು ಕಿವಿಯಲ್ಲಿ ಹೇಳುತ್ತಾನೆ. ಉಳಿದ ಮಕ್ಕಳು ಅನುಕರಣೆ ಮಾಡುತ್ತಾರೆ. ಸರದಿಯಂತೆ ಮುಂದಿನ ವಿದ್ಯಾರ್ಥಿಗಳಿಗೆ ಬೇರೆ ಕೃತಿ ಮಾಡಲು ಸ್ಪಷ್ಟವಾದ ಸೂಚನೆ ಕೊಡುತ್ತಾನೆ.

ಚಟುವಟಿಕೆಗಳು ಉದಾ– 1. ಚಪ್ಪಾಳೆ ತಟ್ಟು 2. ಜಿಗಿ 3. ಹಾಡು 4. ಕೈ ಮೇಲೆತ್ತು 5. ನೃತ್ಯ ಮಾಡು 6. ಸೆಡ್ಡು ಹೊಡೆ 7. ಚಿಟಿಕೆ ಹೊಡೆ 8. ನಮಸ್ಕಾರ ಮಾಡು







**ಸೂಚನೆ:** ಇಂತಹ ಬೇರೆ ಬೇರೆ ಸೂಚನೆಗಳ ಲೇಖನ ಮಾಡಲು ಹೇಳಿರಿ.

# ಭ, ಷ, ಏ, ಪ ಅಕ್ಷರಗಳ ಪರಿಚಯ

ಬಣ್ಣ ತುಂಬು.





ಚಿತ್ರ ನೋಡಿ ಹೆಸರು ಹೇಳು.



ಭರಣಿ



ಭಜನೆ

ಭ



ಭಲ್ಲೆ



ಷಟ್ಕೋನ

ಷ



ಭಾಷಣ



ಹರುಷ

'ಭ' ಅಕ್ಷರಕ್ಕೆ ◯ ಹಾಕು.

'ಷ' ಅಕ್ಷರಕ್ಕೆ ☐ ಹಾಕು

| | | | |
|---|---|---|---|
| ಭರಮ | ನಭ | ಶೇಷನಾಗ | ವೇಷ |
| ಆಭರಣ | ಭರತ | ವರುಷ | ಭೂಷಣ |
| ಭವನ | ಭಜನೆ | ಸುಭಾಷ | ವಿಶೇಷ |

ತೀಡು.



ಸೂಚನೆ: ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಭ' ಮತ್ತು 'ಶ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.







'ಪ' ಅಕ್ಷರಕ್ಕೆ ◯ ಹಾಕು.

'ಏ' ಅಕ್ಷರಕ್ಕೆ □ ಹಾಕು

| | |
|---|---|
| ಪಟ | ಏರು |
| ಪಶು | ಏಳಿಗೆ |
| ಪರಮ | ಏಕೆ |
| ಪಚನ | ಏರಿ |
| | ಏಕಕ |

ತೀಡು.

ಪ ಪ ಪ ಪ ಪ

ಏ ಏ ಏ ಏ ಏ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಪ' ಮತ್ತು 'ಏ' ಅಕ್ಷರಗಳನ್ನು ಪರಿಚಯಿಸಿರಿ.

## ೆ - ಎತ್ವ

'ೆ' ಎತ್ವ ಜೋಡಿಸಿ ಓದು.

| | | | | | | | | | |
|---|---|---|---|---|---|---|---|---|---|
| ರ | + | ೆ | = | ರೆ | ವ | + | ೆ | = | ವೆ |
| ಗ | + | ೆ | = | ಗೆ | ನ | + | ೆ | = | ನೆ |
| ಬ | + | ೆ | = | ಬೆ | ಯ | + | ೆ | = | ಯೆ |




ಓದು ಮತ್ತು ಬರೆ.

| | | | |
|---|---|---|---|
| ಗರೆ | ದಯೆ | ನರೆ | ನಗೆ |
| ಬರೆ | ಸುಧೆ | ಬಗೆ | |
| ಗಾದೆ | ಮರೆ | ತೆರೆ | |

## ೇ - ಏತ್ವ ಸ್ವರ

'ೇ' ಏತ್ವ ಸ್ವರ ಜೋಡಿಸಿ ಓದು.

| | | | | | | | | | |
|---|---|---|---|---|---|---|---|---|---|
| ರ | + | ೇ | = | ರೇ | ಬ | + | ೇ | = | ಬೇ |
| ತ | + | ೇ | = | ತೇ | ದ | + | ೇ | = | ದೇ |
| ಸ | + | ೇ | = | ಸೇ | ವ | + | ೇ | = | ವೇ |




ಓದು ಮತ್ತು ಬರೆ.

| | | | |
|---|---|---|---|
| ಕೇರು | ತೇರು | ರೇವತಿ | ಬೇರು |
| ಬೇರೆ | ಸೇರು | ದೇವರು | ಬೇಸರ |
| ಜೇನು | ಶೇರು | ನೇಸರ | ಕೇಸರಿ |

**ಸೂಚನೆ:** 'ೆ' ಎತ್ವ ಮತ್ತು 'ೇ' ಏತ್ವ ಸ್ವರ ಚಿಹ್ನೆಗಳನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.



# ಸ್ವರ ಚಿಹ್ನೆಗಳನ್ನು ಜೋಡಿಸೋಣ.

| ˇ | ಾ | ಿ | ೀ | ು | ೂ | ೆ | ೇ |
|---|---|---|---|---|---|---|---|
| ರ | ರಾ | ರಿ | ರೀ | ರು | ರೂ | ರೆ | ರೇ |
| ಸ | ಸಾ | ಸಿ | ಸೀ | ಸು | ಸೂ | ಸೆ | ಸೇ |
| ತ | ತಾ | | | | | | |
| ಟ | | ಟಿ | | | | | |
| ಮ | | | | | | | |
| ಕ | | | | | | | |
| ಗ | | | | | | | |
| ದ | | | | | | | |
| ಯ | | | | | | | |
| ನ | | | | | | | |
| ವ | | | | | | | |
| ಪ | | | | | | | |
| ಭ | | | | | | | |
| ಷ | | | | | | | |

**ಸೂಚನೆ:** ಪರಿಚಯಿಸಿದ ಅಕ್ಷರ ಮತ್ತು ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಬಳ್ಳಿ ತಯಾರಿಸಿಕೊಳ್ಳಿರಿ.

ವಾಚನಪಾಠ

# 6. ಉಪವನ

**ಓದು ಮತ್ತು ಬರೆ.**



ಇದು ಉಪವನ
ಇದು ಸುಭಾಷನಗರದ ಉಪವನ
ಈ ಉಪವನ ಮನೆಗೆ ಸಮೀಪ
ಮದನ, ನಯನರ ಮರ ಏರುವ ಆಟ
ಉಮರ, ನಭಾ, ನರೇಶ, ಪರಶುರಾಮರ
ವೇಷಭೂಷಣದ ಆಟ
ಈಗ ಊಟದ ಸಮಯ

| | | | |
|---|---|---|---|
| ಉ | ಊ | ಎ | ಏ |
| ದು | ಸು | ರು | ಶು |
| ಭೂ | ನೆ | ಗೆ | |
| ರೇ | ವೇ | | |

## ಕೂಗುಗಳು

**ಹಾಡೋಣ, ಕುಣಿಯೋಣ.**



ಮರದ ಮೇಲೆ ಕೋಗಿಲೆಯು
ಕುಹೂ ಕುಹೂ ಕುಹೂ
ಹಾರಿ ಬಂದ ಕರಿಯ ಕಾಗೆ
ಕಾವ್ ಕಾವ್ ಕಾವ್



ಬೆಳಗು ಬೇಗ ಎದ್ದ ಕೋಳಿ
ಕೊಕ್ ಕೊಕ್ ಕೊಕ್
ಗೂಡಿನಲ್ಲಿ ಗುಬ್ಬಿ ಜೋಡಿ
ಚಿಂವ್ ಚಿಂವ್ ಚಿಂವ್



ಒಲೆಯ ಬಳಿಯಲಿಂದ ಬೆಕ್ಕು
ಮ್ಯಾಂವ್ ಮ್ಯಾಂವ್ ಮ್ಯಾಂವ್
ಮನೆಯ ಕಾಯೊ ಟಾಮಿ ನಾಯಿ
ಬೌ ಬೌ ಬೌ

**ಸೂಚನೆ:** ಪರಿಚಯಿಸಿದ ಅಕ್ಷರಗಳ ಸಹಾಯದಿಂದ ‘ಉಪವನ’ ಈ ವಾಚನ ಪಾಠ ಕೊಡಲಾಗಿದೆ. ಅಕ್ಷರಗಳ ದೃಢೀಕರಣಕ್ಕಾಗಿ ಮಕ್ಕಳಿಂದ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ. ‘ಕೂಗುಗಳು’ ಶಿಶು ಗೀತೆಯನ್ನು ಸಾಭಿನಯದೊಂದಿಗೆ ಹಾಡಿಸಿರಿ. ಬೇರೆ ಬೇರೆ ಪ್ರಾಣಿ – ಪಕ್ಷಿಗಳ ಧ್ವನಿಗಳನ್ನು ಅನುಕರಣೆ ಮಾಡಲು ಹೇಳಿರಿ.

# 7. ಪರಿಸರ ಗೀತೆ



**ಹಾಡೋಣ, ಕುಣಿಯೋಣ.**



ಒಂದು ಎರಡು ಮೂರು
ಗಿಡ ನೆಡುವ ನೂರಾರು
  ಎರಡು ಮೂರು ನಾಲ್ಕು
  ದಿನವೂ ನೀರು ಹಾಕು
ಮೂರು ನಾಲ್ಕು ಐದು
ಸಾಲು ಮರದ ತಿಮ್ಮಕ್ಕನ ನೆನೆದು
  ನಾಲ್ಕು ಐದು ಆರು
  ಹಸಿರೇ ನಮ್ಮ ಉಸಿರು
ಐದು ಆರು ಏಳು
ಜಗಕೆ ಕೂಗಿ ಹೇಳು
  ಆರು ಏಳು ಎಂಟು
  ಪ್ರಾಣಿ ಪಕ್ಷಿಗಳ ನಂಟು
ಏಳು ಎಂಟು ಒಂಬತ್ತು
ಮಕ್ಕಳ ಆಟದ ಗಮ್ಮತ್ತು
  ಎಂಟು ಒಂಬತ್ತು ಹತ್ತು
  ಶಾಲೆಗೆ ಹೋಗುವ ಹೊತ್ತು
ಆಟ ಪಾಠದ ಜೊತೆಯಲಿ
ಪರಿಸರ ಸಂರಕ್ಷಣೆ ಹರಿಯಲಿ

–ಗಾಯತ್ರಿ ನಾಗೇಶ

★ ಕೇಳು ಮತ್ತು ಹೇಳು

ಮೂರು – ನೂರು
ಏಳು – ಹೇಳು
ಎಂಟು – ನಂಟು
ಒಂಬತ್ತು – ಗಮ್ಮತ್ತು
ಹತ್ತು – ಹೊತ್ತು
ಜೊತೆಯಲಿ – ಹರಿಯಲಿ

**ಸೂಚನೆ:**
- ಕವಿತೆಯ ಸಹಾಯದಿಂದ ಕನ್ನಡ ಭಾಷೆಯಲ್ಲಿಯ ಅಂಕಿಗಳ ಪರಿಚಯದ ಜೊತೆಗೆ ಪರಿಸರದ ಮಹತ್ವವನ್ನು ತಿಳಿಸಿರಿ.
- ಪ್ರಾಸಯುಕ್ತ ಪದಗಳನ್ನು ಓದಲು ಹೇಳಿರಿ.
- ಪರಿಸರದ ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿರಿ.
  ಉದಾ: ನಿಮ್ಮ ಮನೆಯ ಕೈತೋಟದಲ್ಲಿ ಇರುವ ಗಿಡಗಳ ಹೆಸರು ಹೇಳಿರಿ.

# ಬ, ಡ, ಕ, ಫ, ಐ ಅಕ್ಷರಗಳ ಪರಿಚಯ

ಬಣ್ಣ ತುಂಬು.



ಚಿತ್ರ ನೋಡಿ ಹೆಸರು ಹೇಳು.

ಬ



ಬಳಪ



ಬಳೆ



ಬದನೆಕಾಯಿ

ಡ



ಕಡಗ



ಡಮರು



ಗಿಡ

'ಬ' ಅಕ್ಷರಕ್ಕೆ ◯ ಹಾಕು. 'ಡ' ಅಕ್ಷರಕ್ಕೆ ☐ ಹಾಕು

| | | | |
|---|---|---|---|
| ಬಡವ | ಬರಹ | ದಡ | ಉಡ |
| ಬರ | ಗಬಗಬ | ಸಡಗರ | ಗಡಗಡ |
| ಬಹಳ | ಬಸವ | ಕಡ | ಬಡವ |

ತಿದ್ದು.

ಬ ಬ ಬ ಬ ಬ ಬ

ಡ ಡ ಡ ಡ ಡ ಡ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಬ' ಮತ್ತು 'ಡ' ಅಕ್ಷರಗಳನ್ನು ಪರಿಚಯಿಸಿರಿ.

ತೀಡು.



ಬಣ್ಣ ಬಣ್ಣದ ಟಿಕಳಿಗಳನ್ನು ಹಚ್ಚಿರಿ





ಚಿತ್ರ ನೋಡಿ ಹೆಸರು ಹೇಳು.



ಕಪ್ಪೆ

ಕ



ಕರಡಿ



ಕಮಲ



ಫಲಕ

ಫ



ಫಲ



ಫಸಲು

'ಕ' ಅಕ್ಷರಕ್ಕೆ ○ ಹಾಕು.

'ಫ' ಅಕ್ಷರಕ್ಕೆ □ ಹಾಕು

| | | | |
|---|---|---|---|
| ಕಸ | ಕರಡಿ | ಫಲಿತ | ಫಜೀತಿ |
| ಕದನ | ಸಕಲ | ಫಲಿತಾಂಶ | ಫೇರಿ |
| ಕಲಕಲ | ಕನಕ | ಫಲಹಾರ | ಸಫಲ |

ತೀಡು.

ಕ

ಫ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಕ' ಮತ್ತು 'ಫ' ಅಕ್ಷರಗಳನ್ನು ಪರಿಚಯಿಸಿರಿ.

**ಚಿತ್ರ ನೋಡಿ ಹೆಸರು ಹೇಳು.**



ಐದಳ

ಐ



ಐದು ಬೆರಳು



ಐವರು

**'ಐ' ಅಕ್ಷರಕ್ಕೆ ◯ ಹಾಕು.**

ಐದು
ಐಸಿರಿ
ಐಶ್ವರ್ಯ
ಐಮೂಲೆ
ಐನೂರು
ಐದನೆಯ
ಐಕ್ಯತೆ
ಐಹೊಳೆ
ಐತಿಹಾಸಿಕ

**ತೀಡು.**

ಐ ಐ ಐ ಐ ಐ ಐ

ೈ - ಐತ್ವ ಸ್ವರ

**' ೈ ' - ಐತ್ವ ಸ್ವರ ಜೋಡಿಸಿ ಓದು.**

| | | | | |
|---|---|---|---|---|
| ರ | + | ೈ | = | ರೈ |
| ಕ | + | ೈ | = | ಕೈ |
| ಫ | + | ೈ | = | ಫೈ |
| ಬ | + | ೈ | = | ಬೈ |
| ಡ | + | ೈ | = | ಡೈ |




ರೈತ ..........
ಮೈದಾನ ..........
ದೈವ ..........
ಕೈಪಿಡಿ ..........
ಸೈನಿಕ ..........
ಕೈಗಾಡಿ ..........
ಗೈರು ..........
ಪೈಸೆ ..........

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಐ' ಅಕ್ಷರವನ್ನು ಪರಿಚಯಿಸಿರಿ ಮತ್ತು ' ೈ ' - ಐತ್ವ ಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.



# ಸ್ವರ ಚಿಹ್ನೆಗಳನ್ನು ಜೋಡಿಸೋಣ.

| - | ಾ | ಿ | ೀ | ು | ೂ | ೆ | ೇ | ೈ |
|---|---|---|---|---|---|---|---|---|
| ರ | ರಾ | ರಿ | | | | | | |
| ಸ | ಸಾ | ಸಿ | | | | | | |
| ತ | ತಾ | | | | | | | |
| ಟ | | | | | | | | |
| ಮ | | | | | | | | |
| ಶ | | | | | | | | |
| ಗ | | | | | | | | |
| ದ | | | | | | | | |
| ಯ | | | | | | | | |
| ನ | | | | | | | | |
| ವ | | | | | | | | |
| ಪ | | | | | | | | |
| ಭ | | | | | | | | |
| ಷ | | | | | | | | |
| ಬ | | | | | | | | |
| ಡ | | | | | | | | |
| ಕ | | | | | | | | |
| ಫ | | | | | | | | |

**ಸೂಚನೆ:** ಪರಿಚಯಿಸಿದ ಅಕ್ಷರ ಮತ್ತು ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಬಳ್ಳಿ ತಯಾರಿಸಿಕೊಳ್ಳಿರಿ.

## ಅಕ್ಷರಗಳನ್ನು ಎಣಿಸಿ ಬರೆ

| | | | | | | | | |
|---|---|---|---|---|---|---|---|---|
| ಕ | ಐ | ಬ | ಫ | ಕ | ಐ | ಕ | ಬ | ಕ |
| ಬ | ಕ | ಫ | ಬ | ಕ | ಬ | ಫ | ಐ | ಫ |
| ಡ | ಫ | ಕ | ಬ | ಐ | ಡ | ಬ | ಕ | ಬ |

| ಬ | ಡ | ಕ | ಫ | ಐ |
|---|---|---|---|---|
| 7 | | | | |

## ಚಿಹ್ನೆಗಳನ್ನು ಬಳಸಿ ಶಬ್ದ ತಯಾರಿಸೋಣ.

ನೀರು




ಭಾರ

## ಅರ್ಥಪೂರ್ಣ ಶಬ್ದ ತಯಾರಿಸು.

ನೆ ಮ ಮನೆ

ವೆ ಸೇ ತು ..........

ನು ಮ ಜ ..........

ವ ನ ಭ ..........

ವೆ ದು ಮ ..........

ತ ಭಾ ರ ..........

**ಸೂಚನೆ:** ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಹೊಸ ಹೊಸ ಶಬ್ದಗಳನ್ನು ತಯಾರಿಸಲು ಪ್ರೋತ್ಸಾಹಿಸಿರಿ.

# ಚಿತ್ರ ಕ್ರಮ ಹಚ್ಚು.



ತೀಡು.





ಆಕೃತಿ ಪೂರ್ಣ ಮಾಡು.



ಬಣ್ಣ ತುಂಬು.



ಚಿತ್ರ ಪೂರ್ಣ ಮಾಡು.



**ಸೂಚನೆ:** ಮಕ್ಕಳಿಗೆ ಕ್ರಮಸಂಬಂಧ ತಿಳಿಸಲು ಬೇರೆ ಬೇರೆ ಚಿತ್ರಗಳ ಉಪಯೋಗ ಮಾಡಿರಿ.

# ಥೈ ಥಕ ಥೈ

## ಹಾಡೋಣ, ಕುಣಿಯೋಣ.



ಬಾತುಕೋಳಿ ಪೀಪಿ ಹಿಡಿದು
ಪೀ ಎಂದಿತು ಪೀಪೀ ಎಂದಿತು
ಬಾತು ಮರಿ ಕುಣಿದು ಕುಣಿದು
ಥೈ ಎಂದಿತು ಥೈ ಥೈ ಎಂದಿತು
ಪೀ ಪಿ ಪಿ ಪೀ ಪಿ ಪೀ ಪಿ
ಥೈ ಥಕ ಥಕ ಥೈ
ಥೈ ಥೈ ಥೈ

–ಎಂ.ವಿ. ಸೀತಾರಾಮಯ್ಯ

## ಮೊಲಕ್ಕೆ ದಾರಿ ತೋರಿಸು.



**ಸೂಚನೆ:** 'ಥೈ ಥಕ ಥೈ' ಶಿಶುಗೀತೆಯನ್ನು ಸಾಭಿನಯದೊಂದಿಗೆ ಹಾಡಿಸಿರಿ. ಮೊಲ ಹುಲ್ಲು ತಿನ್ನಲು ಹೋಗುವ ಸಲುವಾಗಿ ಮಕ್ಕಳಿಗೆ ದಾರಿ ಹುಡುಕಲು ಹೇಳಿರಿ.

# ಘ, ಠ, ಢ, ಜ, ಣ, ಒ, ಓ ಅಕ್ಷರಗಳ ಪರಿಚಯ

ಬಣ್ಣ ತುಂಬು.

ಘ ಠ ಢ

ಚಿತ್ರ ನೋಡಿ ಹೆಸರು ಹೇಳು.



ಘಂಟೆ



ಠಸ್ಸೆ



ಢಕ್ಕೆ

'ಘ' ಅಕ್ಷರಕ್ಕೆ ◯ ಹಾಕು. 'ಠ' ಅಕ್ಷರಕ್ಕೆ △ ಹಾಕು. 'ಢ' ಅಕ್ಷರಕ್ಕೆ □ ಹಾಕು.

| | | |
|---|---|---|
| ಘಟಕ | ಪಾಠ | ಢಣಢಣ |
| ಘನ | ಪಠಣ | ಆರೂಢ |
| ಘಟನೆ | ಮಠ | ಆಷಾಢ |

ತೀಡು.

ಘ ಘ ಘ ಘ ಘ

ಠ ಠ ಠ ಠ ಠ

ಢ ಢ ಢ ಢ ಢ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ ಘ,ಠ, ಢ ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.



ಜಳಕ



ಜನರು

ಜ



ಜಡೆ



ಬಾಣ



ಹಣ

ಣ



ನೊಣ

'ಜ' ಅಕ್ಷರಕ್ಕೆ ◯ ಹಾಕು.

ವನಜ ಜನಕ

ಜಲ ಜಯ

ಜಲಜ

ಖಾಲಿ ಚೌಕಟ್ಟಿನಲ್ಲಿ 'ಣ' ಅಕ್ಷರ ಬರೆದು ಓದು.

ಕಣ ಖ.......

ನೊ....... ಜಾ.......

ಗ.......ಪ

ತೀಡು.

ಜ ಜ ಜ ಜ ಜ

ಣ ಣ ಣ ಣ ಣ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಜ' ಮತ್ತು 'ಣ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.



ಒಲೆ



ಒನಕೆ

ಒ



ಒಣಮರ



ಓಡು

ಓ



ಓತಿಕಾಟ



ಓದು

'ಒ' ಅಕ್ಷರಕ್ಕೆ ○ ಹಾಕು.

'ಓ' ಅಕ್ಷರಕ್ಕೆ □ ಹಾಕು.

| | | | |
|---|---|---|---|
| ಒಡೆಯ | ಒಡಲು | ಓಲೆ | ಓಡಾಟ |
| ಒಲುಮೆ | ಒಣ | ಓಕುಳಿ | ಓಣಿ |

ತೀಡು.

ಒ ಒ ಒ ಒ ಒ

ಓ ಓ ಓ ಓ ಓ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಒ' ಮತ್ತು 'ಓ' ಅಕ್ಷರಗಳನ್ನು ಪರಿಚಯಿಸಿರಿ.

## ೊ - ಒತ್ವ

'ೊ' - ಒತ್ವ ಜೋಡಿಸಿ ಓದು.

| | | | | | | | | | |
|---|---|---|---|---|---|---|---|---|---|
| ರ | + | ೊ | = | ರೊ | ತ | + | ೊ | = | ತೊ |
| ಘ | + | ೊ | = | ಘೊ | ಜ | + | ೊ | = | ಜೊ |
| ಢ | + | ೊ | = | ಢೊ | ಣ | + | ೊ | = | ಣೊ |




ಓದು ಮತ್ತು ಬರೆ.

ನೊಣ ......................  ಜೊತೆ ......................

ದೊರೆ ......................  ಸೊಗಸು ......................

ನೊರೆ ......................  ಸೊಸೆ ......................

ಬೊಗಸೆ ......................  ಕೊಡೆ ......................

## ೋ - ಒತ್ವ ಸ್ವರ

'ೋ' - ಒತ್ವ ಸ್ವರ ಜೋಡಿಸಿ ಓದು.

| | | | | | | | | | |
|---|---|---|---|---|---|---|---|---|---|
| ರ | + | ೋ | = | ರೋ | ತ | + | ೋ | = | ತೋ |
| ಘ | + | ೋ | = | ಘೋ | ಜ | + | ೋ | = | ಜೋ |
| ಢ | + | ೋ | = | ಢೋ | ಣ | + | ೋ | = | ಣೋ |




ಓದು ಮತ್ತು ಬರೆ.

ನೋಟ .........  ತೋಟ .........  ಕೋಟೆ .........

ಮೋಡ ..........  ಸೋಮ .........  ದೋಸೆ .........

ಸೋರು .........  ಪೋಣಿಸು .........

**ಸೂಚನೆ:** ' ೊ'– ಒತ್ವ ಮತ್ತು ' ೋ'– ಒತ್ವ ಸ್ವರ ಚಿಹ್ನೆಗಳನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

ವಾಚನಪಾಠ

# 8. ಕವಿತೆಯ ಸಭೆ

ಓದು ಮತ್ತು ಬರೆ.




ಇದು ಸಭೆಯ ಕೊಠಡಿ.
ಸಭೆಯ ಘೋಷಣೆ ಮಾಡಿದರು.
ಕವಿತೆಯ ವಿಷಯ ಘಮ ಘಮ ಕುಸುಮ.
ಬಸವ, ಆರೂಢ, ಕೈಲಾಸ, ರಮಣ, ಕವಿತೆ ಓದಿದರು.
ಫೈಜಲ, ಜಯಾ ಗಾಯನ ಮಾಡುತ ಕುಣಿದಾಡಿದರು.

| | | | |
|---|---|---|---|
| ಐ | ಒ | ಓ | ಕೈ |
| ಫೈ | ಕೊ | ಘೊ | |

ಓದು ಮತ್ತು ಬರೆ.

ಕೈಲಾಸ ............................

ಫೈಜಲ ............................

ಕೊಠಡಿ ............................

ಘೋಷಣೆ ............................

**ಸೂಚನೆ:** ಇಲ್ಲಿಯವರೆಗೆ ಪರಿಚಯಿಸಿದ ಅಕ್ಷರಗಳು ಮತ್ತು ಸ್ವರ ಚಿಹ್ನೆಗಳನ್ನು ಉಪಯೋಗಿಸಿ 'ಕವಿತೆಯ ಸಭೆ' ಈ ವಾಚನ ಪಾಠವನ್ನು ಕೊಡಲಾಗಿದೆ. ಅಕ್ಷರಗಳ ಮತ್ತು ಸ್ವರ ಚಿಹ್ನೆಗಳ ದೃಢೀಕರಣಕ್ಕಾಗಿ ಮಕ್ಕಳಿಂದ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ.

# 9. ಬಸವಣ್ಣ

**ಹಾಡೋಣ, ಕುಣಿಯೋಣ.**



ಅಣ್ಣ ಅಣ್ಣ ಬಸವಣ್ಣ
ಜೋಡು ಕೊಂಬು ನಿನದಣ್ಣ
ಬಿಳಿ ಬಿಳಿ ನಿನ್ನ ಮೈಬಣ್ಣ
ಹೊಳೆಯುವದೆರಡು ನಿನ ಕಣ್ಣ

ಘಣ ಘಣ ಗಂಟೆಯು ಕೊರಳಿನಲಿ
ಘಲ್ ಘಲ್ ಗೆಜ್ಜೆಯು ಕಾಲಿನಲಿ
ಬಂದರೆ ನೀನು ಓಣಿಯಲಿ
ನೆರೆವರು ಜನರು ಬೀದಿಯಲಿ

**ಓದು.**

| | |
|---|---|
| ಅಣ್ಣ – ಅಣ್ಣ | ಬಿಳಿ – ಬಿಳಿ |
| ಘಣ – ಘಣ | ಘಲ್ – ಘಲ್ |

**ಓದು ಮತ್ತು ಬರೆ.**




ಉದಾ: ಅಣ್ಣ

1) ..........................................

2) ..........................................

3) ..........................................

4) ..........................................

**ಸೂಚನೆ:** ಬಸವಣ್ಣನ ಬಗ್ಗೆ ಬೇರೆ–ಬೇರೆ ಪ್ರಶ್ನೆಗಳನ್ನು ಕೇಳಿರಿ. ಉದಾ: ನಿಮ್ಮ ಮನೆಯಲ್ಲಿರುವ ಸಾಕುಪ್ರಾಣಿಗಳ ಹೆಸರು ಹೇಳಿರಿ.

# ಳ, ಚ, ಛ, ಹ, ಲ, ಔ ಅಕ್ಷರಗಳ ಪರಿಚಯ

ಚಿತ್ರ ನೋಡಿ ಹೆಸರು ಹೇಳು.







'ಳ' ಅಕ್ಷರಕ್ಕೆ △ ಹಾಕು.

'ಚ' ಅಕ್ಷರಕ್ಕೆ ◯ ಹಾಕು.

| | |
|---|---|
| ತಿಂಗಳ ಅಂಗಳ | ಚಪಾತಿ ಚಹಾ ಚದುರಂಗ |
| ಬಳಗ ಗಳಗಳ | ಚತುರ ಚಕ್ರ ಚಲುವ |
| | ಚಪಲ ಚಕ್ಕುಲಿ |

ತೀಡು.







**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಳ' ಮತ್ತು 'ಚ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.





ಛಡಿ

ಛ

ಛತ್ರಿ



ಛಗ





ಹಡಗು

ಹದ್ದು

ಹ



ಹಗ್ಗ

'ಛ' ಅಕ್ಷರಕ್ಕೆ ○ ಹಾಕು.

'ಹ' ಅಕ್ಷರಕ್ಕೆ □ ಹಾಕು.

| | |
|---|---|
| ಛಲ | ಹಗಲು |
| ಛವಿ    ಛತ್ರ | ಹಗುರ    ಹರ |

## ತೀಡು.

ಛ ಛ ಛ ಛ ಛ ಛ

ಹ ಹ ಹ ಹ ಹ ಹ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಛ' ಮತ್ತು 'ಹ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.



ಲತೆ



ಲಕೋಟೆ

ಲ



ಲವಂಗ



ಔಷಧ



ಔತಣ

ಔ



ಔಡಲ

## ‘ಲ’ ಅಕ್ಷರಕ್ಕೆ ◯ ಹಾಕು. ‘ಔ’ ಅಕ್ಷರಕ್ಕೆ ☐ ಹಾಕು.

| | | | |
|---|---|---|---|
| ಲಡ್ಡು | ಫಲ | ಔದುಂಬರ | ಔಪಚಾರಿಕ |
| ಲಸಿಕೆ | ಬಾಲ | ಔಚಿತ್ಯ | ಔದ್ಯೋಗಿಕ |
| ಕಾಲ | ಲಯ | ಔಷ್ಣಿಕ | |

## ತೀಡು.

ಲ ಲ ಲ ಲ ಲ

ಔ ಔ ಔ ಔ ಔ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ ‘ಲ’ ಮತ್ತು ‘ಔ’ ಅಕ್ಷರಗಳನ್ನು ಪರಿಚಯಿಸಿರಿ.

## ೌ - ಔತ್ವ

| | | | | |
|---|---|---|---|---|
| ರ | + | ೌ | = | ರೌ |
| ಳ | + | ೌ | = | ಳೌ |
| ಚ | + | ೌ | = | ಚೌ |
| ಛ | + | ೌ | = | ಛೌ |
| ಹ | + | ೌ | = | ಹೌ |
| ಲ | + | ೌ | = | ಲೌ |

**'ೌ' - ಔತ್ವ ಸ್ವರ ಜೋಡಿಸಿ ಓದು.**




**ತೀಡು ಮತ್ತು ಬರೆ.**

ರ ರೌ ಳ ಳೌ

ಚ ಚೌ ಛ ಛೌ

ಹ ಹೌ ಲ ಲೌ

**ಓದು ಮತ್ತು ಬರೆ.**

| | | | |
|---|---|---|---|
| ನೌಕೆ | ........ | ಗೌಡ | ........ |
| ಚೌರಸ | ........ | ಮೌನ | ........ |
| ಗೌಳಿಗ | ........ | ಗೌತಮ | ........ |
| ಗೌರಿ | ........ | ಸೌರಭ | ........ |
| ಸೌತೆಕಾಯಿ | ........ | ಲೌಕಿಕ | ........ |

**ಸೂಚನೆ:** 'ೌ' - ಔತ್ವ ಸ್ವರ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ.

# 10. ಕಾಗದದಿಂದ ವಿವಿಧ ವಸ್ತುಗಳನ್ನು ತಯಾರಿಸು



ಸುಜಯನು ಕೈಯಲಿ ಕಾಗದ
ಹಿಡಿದಿಹನು.



ಸುಜಯನು ಕಾಗದ
ಮಡಿಚುತಿಹನು.



ಸುಜಯನು ಕಾಗದದ ವಿಮಾನ
ತಯಾರಿಸಿದನು.



ಹಮೀದನು ಕಾಗದದ ಹೂವು
ತಯಾರಿಸಿದನು.



ಜೋಸೆಫ್‌ನು ಕಾಗದದ ದೋಣಿ
ತಯಾರಿಸಿದನು.

**ಸೂಚನೆ:** ಪರಿಸರದಲ್ಲಿ ಉಪಲಬ್ಧವಿರುವ ಸಾಹಿತ್ಯಗಳನ್ನು ಉಪಯೋಗಿಸಿ ವಿವಿಧ ವಸ್ತುಗಳನ್ನು ತಯಾರಿಸಿರಿ.

# ಝ, ಥ, ಖ ಅಕ್ಷರಗಳ ಪರಿಚಯ

ತೀಡು.



ಚಿತ್ರ ನೋಡಿ ಹೆಸರು ಹೇಳು.



ಝಳ



ಝರಿ

ಝ



ಝಗ



ಥರ್ಮಾಸ್

ಥ



ಥಡಿ



ಕಥಕ

‘ಝ’ ಅಕ್ಷರಕ್ಕೆ ◯ ಹಾಕು.

‘ಥ’ ಅಕ್ಷರಕ್ಕೆ ☐ ಹಾಕು

| | | | | | |
|---|---|---|---|---|---|
| ಝರಿ | ಝಗ | ಝಗಮಗ | ಥಟ್ಟನೆ | ಥಡಿ | ರಥ |
| ಝಳ | ಝಳಪ | ಝಣಝಣ | ಥಳಥಳ | ಥಳಿಸು | ಥರ |

ತೀಡು.

ಝ

ಥ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ ‘ಝ’ ಮತ್ತು ‘ಥ’ ಅಕ್ಷರಗಳನ್ನು ಪರಿಚಯಿಸಿರಿ.

# ಶಬ್ದಗಳ ಆಟ

ಚಿತ್ರ ನೋಡು, ಯೋಗ್ಯ ಸ್ತಂಭದಲ್ಲಿ ಹೆಸರು ಬರೆ.


ನವಿಲು


ರಾಜ


ಸೈನಿಕ


ರಾಣಿ


ಗಾಯಕಿ


ರೈತ


ಹುಡುಗಿ


ಶಿಕ್ಷಕಿ

| ಅವನು | ಅವಳು | ಅದು |
|---|---|---|
| ರೈತ | ಸೇವಕಿ | ನಾಯಿ |
| | | |
| | | |
| | | |


ಚಾಲಕ


ನಾಯಿ


ಶಾಲೆ


ತಾಯಿ


ಮನೆ


ಮೇಜು


ಬಡಿಗ

**ಸೂಚನೆ:** ಚಿತ್ರಗಳ ಸಹಾಯದಿಂದ ಮಕ್ಕಳಿಗೆ ಪರೋಕ್ಷವಾಗಿ ಲಿಂಗಗಳನ್ನು ಪರಿಚಯಿಸಿರಿ.

ತೀಡು.



ಚಿತ್ರ ನೋಡಿ ಹೆಸರು ಹೇಳು.

ಖ

ಖಡ್ಗ





ಖರ್ಜೂರ

ಖಣ



'ಖ' ಅಕ್ಷರಕ್ಕೆ ◯ ಹಾಕು.

ಖಗ
ಶಿಖರ
ಖಂಡ
ಖನಿಜ
ಖರೀದಿ
ಖಣಿ
ಖಗೋಳ

ತೀಡು.

ಖ

'ೃ' ವಟ್ರಸುಳಿ ಜೋಡಿಸಿ ಬರೆ.

ಶ .............................. ಮ .............................. ಬ ..............................

ಹ .............................. ಸ .............................. ಕ ..............................

ಓದಿ ಬರೆ.

ಕೃತಿ .............................. ಗೃಹ .............................. ಹೃದಯ ..............................

ಶೃತಿ .............................. ನೃಪ .............................. ಕೃಷಿ ..............................

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಖ' ಅಕ್ಷರವನ್ನು ಪರಿಚಯಿಸಿರಿ. 'ೃ' ವಟ್ರಸುಳಿ ಚಿಹ್ನೆಯನ್ನು ಪರಿಚಯಿಸಿದ ಅಕ್ಷರಗಳಿಗೆ ಜೋಡಿಸಿ ಓದಲು ಹೇಳಿರಿ.

ವಾಚನಪಾಠ

# 11. ಹಸುವಿನ ಹಾಲು

ಓದು ಮತ್ತು ಬರೆ.



ಬಸವನು ಹಸುವಿನ ಹಾಲನು ಕರೆದನು
ನೊರೆ ನೊರೆ ಹಾಲು ಚರ ಚರ ಕರೆದನು



ಹಾಲನು ತರಲು ಛಾಯಾ ಹೋದಳು
ಮನೆಯಲಿ ಔತಣವಿದೆ ಎನಲು



ಝಾಕೀರ, ಥಾಮಸ್ ಹಾಲನು ಕೇಳಲು
ಛಾಯಾ ಬಸವ ಮುಖ - ಮುಖ ನೋಡಲು
ಹಾಲಿನ ಚರಿಗೆ ಖಾಲಿ ಖಾಲಿ
ನಡೆದರು ಮನೆಗೆ ಬರಿಗೈಲಿ

ಓದು ಮತ್ತು ಬರೆ.

ಹಸು ........ ಹಾಲು ........ ಚರಿಗೆ ........

ಮನೆ ........ ಹಾಲು ಕರೆ ........

**ಸೂಚನೆ:** ಇಲ್ಲಿಯವರೆಗೆ ಪರಿಚಯಿಸಿದ ಅಕ್ಷರಗಳ ಸ್ವರ ಚಿಹ್ನೆಗಳ ಸಹಾಯದಿಂದ ವಾಚನ ಪಾಠ-'ಹಸುವಿನ ಹಾಲು' ಕೊಡಲಾಗಿದೆ. ಅಕ್ಷರಗಳ ದೃಢೀಕರಣಕ್ಕಾಗಿ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ. ಮಕ್ಕಳಿಗೆ ಮೂರು-ನಾಲ್ಕು ವರ್ಣಾಕ್ಷರಗಳ ಶಬ್ದಗಳನ್ನು ಹೇಳಿ ಶ್ರುತಲೇಖನ ಮಾಡಿಸಿಕೊಳ್ಳಿರಿ.

# 12. ಬಣ್ಣದ ಹಕ್ಕಿ

**ಹಾಡೋಣ, ಕುಣಿಯೋಣ.**



ಬಾರಲೆ ಬಾ ಬಣ್ಣದ ಹಕ್ಕಿ
ಬಾರಲೆ ಬಾ ಹಾರುವ ಹಕ್ಕಿ

ಗೆಳೆಯರು ಯಾರು ಆಡಲು ಇಲ್ಲ
ಕಳೆಯುವುದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡಲು ಕಲಿಸು
ಬಾ ಬಾ ನನಗೂ ಹಾರಲು ಕಲಿಸು

ಅವ್ವನು ನೀರಿಗೆ ಹೋಗಿಹಳು
ಅಪ್ಪನು ಪೇಟೆಗೆ ಹೋಗಿಹನು
ಅವ್ವನು ಬರಲಿ ಅಪ್ಪನು ಬರಲಿ
ತಿನ್ನಲು ಹಣ್ಣನು ನೀಡುವೆನು

ನನಗೂ ಬಣ್ಣದ ರೆಕ್ಕೆಯ ಹಚ್ಚು
ಹಿಂಗಡೆ ಬಣ್ಣದ ಪುಚ್ಛವ ಚುಚ್ಚು
ನೆತ್ತಿಯ ಮೇಲೆ ಜುಟ್ಟನು ಚುಚ್ಚು
ಮೆಲ್ಲನೆ ಮೇಲೆ ಹಾರಲು ಹಚ್ಚು

ನಾನು ನೀನು ಇಬ್ಬರು ಕೂಡಿ
ಮುಗಿಲಿನೆಡೆಗೆ ಹಾರುವ ಬಾ
ಅಲ್ಲಿಂದಿತ್ತ ಇಲ್ಲಿಂದತ್ತ
ಹಾರುತ ಹಾಡುತ ನಲಿಯುವ ಬಾ

– ಸಿ.ಫ. ಕಟ್ಟಿಮನಿ

**ಸೂಚನೆ:**
- ಮಕ್ಕಳಿಂದ ಕವಿತೆಯನ್ನು ಸಾಭಿನಯದೊಂದಿಗೆ ಮತ್ತು ಲಯಬದ್ಧವಾಗಿ ಹಾಡಿಸಿರಿ.
- ಬೇರೆ ಬೇರೆ ಪಕ್ಷಿಗಳ ಕುರಿತು ಚರ್ಚಿಸಿರಿ. ಉದಾ: ನಿನಗೆ ಇಷ್ಟವಾದ ಪಕ್ಷಿಯ ಹೆಸರು ಹೇಳು.

# 13. ಪೂರ್ಣವಿರಾಮದ ಪರಿಚಯ

**ಪ್ರತಿಯೊಂದು ಗುಂಪಿನಿಂದ ಶಬ್ದ ತೆಗೆದುಕೊಂಡು ಅರ್ಥಪೂರ್ಣ ವಾಕ್ಯ ತಯಾರಿಸು, ಕೊನೆಗೆ ಪೂರ್ಣ ವಿರಾಮ ಕೊಡು.**

ಅಮರ ರಘು
ತಾಯಿ ರೂಪಾ
ಕಾಕಾ ಜಯಾ
ಗೌರವ ರೋಜಾ
ಗೀತಾ ಸವಿತಾ

ಔಷಧ ಸಾಗರ
ನೀರು ಊಟ
ನದಿ ಆಕಾಶ
ಮೋಡ ಮಳೆ
ಆಟ ಕೈಗಳು
ಬೇಗ

ಆಡು ನೋಡು
ಏಳು ಮಾಡು
ನೀಡು ನಡೆ
ಕುಡಿ ತೆಗೆದುಕೊ
ಕೊಡು

●

**ಉದಾ: ಅಮರ ಊಟ ಮಾಡು.**

........................................ ........................................

........................................ ........................................

........................................ ........................................

## ಅರ್ಥಪೂರ್ಣ ವಾಕ್ಯ ತಯಾರಿಸೋಣ

**ಪ್ರತಿಯೊಂದು ವೃತ್ತದಲ್ಲಿಯ ಶಬ್ದ ತೆಗೆದುಕೊಂಡು ಅರ್ಥಪೂರ್ಣ ವಾಕ್ಯ ತಯಾರಿಸು, ಬರೆ ಮತ್ತು ಓದು.**

ಸಾರಾ ರಾಜು
ನೀರು ಸುಭಾಷ
ಜೂಲಿ ರಫೀಕ

ಶಾಲೆಗೆ ಜೋರಾಗಿ
ಊಟ ಜುಳುಜುಳು
ಮನೆಗೆ ಬಜಾರಕ್ಕೆ
ನೀರು

ಮಾಡುವನು.
ಹೋದನು.
ಬರುವನು. ಬರುವಳು.
ಹರಿಯುವುದು. ಬಾ.
ತಾ. ಮಾಡು. ಹೋಗು.

**ಉದಾ: ಸುಭಾಷ ಮನೆಗೆ ಬಾ.**

........................................ ........................................

........................................ ........................................

........................................ ........................................

# 14. ಪ್ರಶ್ನೆ ಚಿಹ್ನೆಯ ಪರಿಚಯ

**ಪ್ರತಿಯೊಂದು ಗುಂಪಿನಿಂದ ಒಂದು ಶಬ್ದ ತೆಗೆದುಕೊಂಡು ಅರ್ಥಪೂರ್ಣ ವಾಕ್ಯ ತಯಾರಿಸು. ತಯಾರಿಸಿದ ವಾಕ್ಯದ ಕೊನೆಗೆ ಪ್ರಶ್ನೆ ಚಿಹ್ನೆ ಕೊಡು.**

| | | | |
|---|---|---|---|
| ದೀಪಾ ಮಳೆ<br>ರೋಹನ<br>ನೀರು ಗೌರಿ<br>ಸುಜಯ ನದಿ<br>ಬಾವಿ ಕೆರೆ | ಯಾವಾಗ<br>ಏನು ಹೇಗೆ<br>ಯಾವುದು<br>ಎಲ್ಲಿಗೆ ಎಲ್ಲಿ<br>ಏಕೆ | ಬರುವಳು ಇರುವನು<br>ಬರುವನು ಇರುವಳು<br>ಹೋಗುವನು<br>ಹೋಗುವಳು<br>ಮಾಡುವಳು<br>ಇರುವುದು | ? |

**ಉದಾ: ಬಾವಿ ಎಲ್ಲಿ ಇರುವುದು?**

.................................................... ....................................................

.................................................... ....................................................

## ಯಾರಮ್ಮಾ?



**ಹಾಡೋಣ, ಕುಣಿಯೋಣ.**

ಚಂದಿರ ಬರುವನು ಇರುಳಿನಲಿ
ಬೆಳಕನು ಕೊಟ್ಟವರಾರಮ್ಮ?
ಕುಣಿಯುವ ನವಿಲಿನ ಗರಿಗಳಲಿ
ಬಣ್ಣವ ನಿಟ್ಟವರಾರಮ್ಮ?
ಮಿನುಗುವ ಮೀನು ನೀರಿನಲಿ
ಈಜನು ಕಲಿಸಿದವರಾರಮ್ಮ?
ಅರಳಿದ ಹೂವು ಬನಗಳಲಿ
ಸುಗಂಧವನಿಟ್ಟವರಾರಮ್ಮ?
ನಲಿಯುವ ಅವ್ವನ ಪ್ರೀತಿಯಲಿ
ಆಕೆಗೆ ಸಾಟಿಯು ಯಾರಮ್ಮ?





**ಸೂಚನೆ:** ಸ್ವತಃ ಕವನ ರಚಿಸಲು ಮಕ್ಕಳಿಗೆ ಸಹಾಯ ಮಾಡಿರಿ.

# 15. ಚಿತ್ರ ವಾಚನ

ಚಿತ್ರದ ಬದಲಾಗಿ ಯೋಗ್ಯ ಶಬ್ದ ಉಪಯೋಗಿಸು. ವಾಕ್ಯ ತಯಾರಿಸು ಬರೆ ಮತ್ತು ಓದು.

ಆಕಾಶದೊಳಗೆ  ಇವೆ.

..........................................................................................

..........................................................................................

ಜೋರಾಗಿ  ಬೀಳುವುದು.

..........................................................................................

..........................................................................................

ಮಳೆಯ ನೀರು  ಸೇರುವುದು.

..........................................................................................

..........................................................................................

ನದಿಯಲಿ  ಈಜಾಡುವವು.

..........................................................................................

..........................................................................................

ನದಿಯ ನೀರು  ಉಣಿಸುವರು.

..........................................................................................

..........................................................................................

 **ಉದಾಹರಣೆಯಂತೆ ಬರೆ.**

| | | | |
|---|---|---|---|
|  |  |  |  |
| ಹೂ | ಹೂಗಳು | ಗರಿ | ............. |
|  |  |  |  |
| ಮೀನು | ............. | ನವಿಲು | ............. |

**ಸೂಚನೆ:** ಮಕ್ಕಳಿಂದ ಚಿತ್ರವಾಚನ ಮಾಡಿಸಿರಿ ಮತ್ತು ಪರೋಕ್ಷವಾಗಿ ವಾಚನಗಳನ್ನು ಪರಿಚಯಿಸಿರಿ. ಚಿತ್ರಗಳ ಸಹಾಯದಿಂದ ಮಕ್ಕಳಿಗೆ ಸ್ವಂತ ವಾಕ್ಯ ಬರೆಯಲು ಹೇಳಿರಿ.



# ಯೋಗ್ಯ ಚಿಹ್ನೆ ಜೋಡಿಸಿ ಶಬ್ದ ಬರೆ ಮತ್ತು ಓದು.



**ಿ ೀ**

- ಬಾವ – ಬಾವಿ
- ಬಳ
- ನರು
- ಚಲ

**ು ೂ**

- ನರ – ನೂರು
- ಕಸ
- ಗಡ
- ಮರ

**ೆ ೇ**

- ಕ ರ
- ಬ ರ
- ಸ ರು – ಸೇರು
- ದ ವ ರು

**ೊ ೋ**

- ಮಡ – ಮೋಡ
- ಕರೆ
- ದಸೆ
- ಹರೆ

**ೌ ೈ**

- ಗಳಿಗ
- ಸತೆಕಾಯಿ – ಸೌತೆಕಾಯಿ
- ಸನಿಕ
- ಕಕಾಲು

**ಸೂಚನೆ:** ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಅರ್ಥಪೂರ್ಣ ಶಬ್ದ ತಯಾರಿಸಿಕೊಳ್ಳಿರಿ.

# ಧ, ಋ, ಅಂ, ಅಃ, ಕ್ಷ, ಜ್ಞ, ಇ‌ ಅಕ್ಷರಗಳ ಪರಿಚಯ

ಚಿತ್ರ ನೋಡಿ ಹೆಸರು ಹೇಳು.



ಧಮನಿ



ಧನ

ಧ



ಧನುಷ್ಯ



ಋಷಿ

ಋಣ

ಋ



ಋತು

'ಧ' ಅಕ್ಷರಕ್ಕೆ ○ ಹಾಕು.

'ಋ' ಅಕ್ಷರಕ್ಕೆ □ ಹಾಕು.

| | | | |
|---|---|---|---|
| ಧರೆ | ಮಧುರ | ಋಗ್ವೇದ | ಋಷಭ |
| ಧರಣಿ | ಧರಿಸು | ಋತುಜಾ | ಋಣಿ |
| ಸಂಬಂಧ | ಧನುಷ್ಯ | | |

ತೀಡು.

ಧ ಧ ಧ ಧ ಧ

ಋ ಋ ಋ ಋ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಧ' ಮತ್ತು 'ಋ' ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.



ಅಂತರಿಕ್ಷ



ಅಂಗಳ

# ಅಂ



ಅಂಗಿ

# ಅಃ

## 'ಅಃ' ಅಕ್ಷರಕ್ಕೆ ◯ ಹಾಕು.

| | |
|---|---|
| ನಮಃ | ಸ್ವತಃ |
| ಪುನಃ | ದುಃಖ |
| ಅಂಶತಃ | ಶತಶಃ |
| ಪೂರ್ಣತಃ | ಅಂತಃಕರಣ |
| ವಿಶೇಷತಃ | |

## 'ಅಂ' ಅಕ್ಷರಕ್ಕೆ ◯ ಹಾಕು.

| | |
|---|---|
| ಅಂದ | ಅಂಕಿ |
| ಅಂಶ | ಅಂಚು |
| ಅಂಗಡಿ | ಅಂಜಲಿ |

## ತೀಡು.

ಅಂ

ಅಃ

**ಸೂಚನೆ:** ಮಕ್ಕಳಿಗೆ 'ಅಂ' ಅನುಸ್ವಾರ ಮತ್ತು 'ಅಃ' ವಿಸರ್ಗ ಅಕ್ಷರಗಳನ್ನು ಪರಿಚಯಿಸಿರಿ.

## ಚಿತ್ರ ನೋಡಿ ಹೆಸರು ಹೇಳು.


ಕ್ಷತ್ರಿಯ

ಕ್ಷ


'ಕ್ಷ' ಕಿರಣ


ಯಜ್ಞ

ಜ್ಞ


ಪ್ರತಿಜ್ಞೆ

## 'ಕ್ಷ' ಅಕ್ಷರಕ್ಕೆ ○ ಹಾಕು.

ರಕ್ಷಣೆ ತಕ್ಷಣ ಅಕ್ಷಯ

ಕ್ಷೇತ್ರ ದಕ್ಷತೆ

ಕ್ಷಯ ಕ್ಷಮೆ

## 'ಜ್ಞ' ಅಕ್ಷರಕ್ಕೆ □ ಹಾಕು.

ಯಜ್ಞ ತಜ್ಞ

ಸೂಜ್ಞ ಸರ್ವಜ್ಞ

## ತೀಡು.

ಕ್ಷ ಕ್ಷ ಕ್ಷ ಕ್ಷ ಕ್ಷ ಕ್ಷ

ಜ್ಞ ಜ್ಞ ಜ್ಞ ಜ್ಞ ಜ್ಞ

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ 'ಕ್ಷ' ಮತ್ತು 'ಜ್ಞ' ಅಕ್ಷರಗಳನ್ನು ಪರಿಚಯಿಸಿರಿ.

ತೀಡು.

| | |
|---|---|
| ಙ | ಙ |
| ಞ | ಞ |

ಂ - ಅನುಸ್ವಾರ

ಃ - ವಿಸರ್ಗ

ಂ / ಃ ಗಳ ಉಪಯೋಗ ಮಾಡು.

| | | | |
|---|---|---|---|
| ಚದ | ಚಂದ | ಸ್ವತ | ಸ್ವತಃ |
| ಅದ | ............ | ದುಖ | ............ |
| ಮದಿರ | ............ | ವಿಶೇಷತ | ............ |
| ಹದರ | ............ | ಶತಷ | ............ |

ಯೋಗ್ಯ ಸ್ವರ ಚಿಹ್ನಗಳ ಉಪಯೋಗ ಮಾಡು.

| | |
|---|---|
| ಇಲ | ಇಲಿ |
| ರೆತ | ............ |
| ಹಲಿ | ............ |
| ನವಲು | ............ |
| ಗೂಡ | ............ |

| | | | |
|---|---|---|---|
| ಾ | ಿ | ೀ | ು |
| ೂ | ೆ | ೇ | ೈ |
| ೊ | ೋ | ೌ | ಂ |
| ಃ | | | |

| | |
|---|---|
| ಕಳಿ | ............ |
| ಕುದುರ | ............ |
| ಗಳಿ | ............ |
| ಕಗಿಲೆ | ............ |
| | ............ |

**ಸೂಚನೆ:** ‘ಙ’ ಮತ್ತು ‘ಞ’ ಅಕ್ಷರಗಳನ್ನು ಪರಿಚಯಿಸಿ ಮತ್ತು ಯೋಗ್ಯ ಸ್ವರ ಚಿಹ್ನೆ ಉಪಯೋಗಿಸಿ ಅರ್ಥಪೂರ್ಣ ಶಬ್ದ ತಯಾರಿಸಲು ಹೇಳಿರಿ.

# 16. ಚಂದ ಚಂದ

ಹಾಡೋಣ, ಕುಣಿಯೋಣ.

ಚಂದ ಚಂದ ಚಂದ
ನನ್ನ ಮನೆ ಚಂದ
ಗುಬ್ಬಿ ಗೂಡು ಚಂದ
ಕೋಗಿಲೆಯ ಧ್ವನಿ ಚಂದ

ಚಂದ ಚಂದ ಚಂದ
ಹಾರುವ ಹಕ್ಕಿ ಚಂದ
ಹಕ್ಕಿಗೆ ರೆಕ್ಕೆ ಚಂದ
ಗಗನದಿ ಚುಕ್ಕಿ ಚಂದ



ಚುಕ್ಕೆ ಜೋಡಿಸು ಚಿತ್ರ ಪೂರ್ಣ ಮಾಡು.



**ಸೂಚನೆ:** ● ಶಿಶುಗೀತೆಯನ್ನು ಸಾಭಿನಯದೊಂದಿಗೆ ಹಾಡಿಸಿರಿ. ● ವರ್ಣಮಾಲೆಯ ಕ್ರಮದಲ್ಲಿ ಚುಕ್ಕೆ ಜೋಡಿಸಲು ಹೇಳಿರಿ.

# ವರ್ಣಮಾಲೆ

## ಸ್ವರಗಳು

ಅ ಆ ಇ ಈ ಉ ಊ ಋ

ಎ ಏ ಐ ಒ ಓ ಔ

ಅಂ ಅಃ

## ವ್ಯಂಜನಗಳು

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ

ಷ ಸ ಹ ಳ

ಕ್ಷ ಜ್ಞ



# ಬರೆಯೋಣ, ಓದೋಣ



| | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
|---|---|---|---|---|---|---|---|---|---|---|---|---|---|---|
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| ಖ | | | | | | | | | | | | | | |
| ಗ | | | | | | | | | | | | | | |
| ಘ | | | | | | | | | | | | | | |
| ಙ | | | | | | | | | | | | | | |
| ಚ | | | | | | | | | | | | | | |
| ಛ | | | | | | | | | | | | | | |
| ಜ | | | | | | | | | | | | | | |
| ಝ | | | | | | | | | | | | | | |
| ಞ | | | | | | | | | | | | | | |
| ಟ | | | | | | | | | | | | | | |
| ಠ | | | | | | | | | | | | | | |
| ಡ | | | | | | | | | | | | | | |
| ಢ | | | | | | | | | | | | | | |
| ಣ | | | | | | | | | | | | | | |
| ತ | | | | | | | | | | | | | | |
| ಥ | | | | | | | | | | | | | | |
| ದ | | | | | | | | | | | | | | |



# ಬರೆಯೋಣ, ಓದೋಣ



| ್ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
|---|---|---|---|---|---|---|---|---|---|---|---|---|---|---|
| ಧ | | | | | | | | | | | | | | |
| ನ | | | | | | | | | | | | | | |
| ಪ | | | | | | | | | | | | | | |
| ಫ | | | | | | | | | | | | | | |
| ಬ | | | | | | | | | | | | | | |
| ಭ | | | | | | | | | | | | | | |
| ಮ | | | | | | | | | | | | | | |
| ಯ | | | | | | | | | | | | | | |
| ರ | | | | | | | | | | | | | | |
| ಲ | | | | | | | | | | | | | | |
| ವ | | | | | | | | | | | | | | |
| ಶ | | | | | | | | | | | | | | |
| ಷ | | | | | | | | | | | | | | |
| ಸ | | | | | | | | | | | | | | |
| ಹ | | | | | | | | | | | | | | |
| ಳ | | | | | | | | | | | | | | |
| ಕ್ಷ | | | | | | | | | | | | | | |
| ಜ್ಞ | | | | | | | | | | | | | | |

**ಸೂಚನೆ:** ಪರಿಚಯಿಸಿದ ಅಕ್ಷರಗಳು ಮತ್ತು ಸ್ವರ ಚಿಹ್ನೆಗಳನ್ನು ಉಪಯೋಗಿಸಿ ಬಳ್ಳಿ ತಯಾರಿಸಲು ಸಹಾಯ ಮಾಡಿರಿ.

ವಾಚನಪಾಠ

# 17. ಹಸಿರೇ ಉಸಿರು

ಓದು ಮತ್ತು ಬರೆ.



ಋಷಿಗಳು ಕಾಡಿನಲ್ಲಿ ಯೋಗ ಸಾಧನೆ ಮಾಡಿದರು. ನಾಡಿನ ಜನರು ಋಷಿಗಳಿಂದ ಯೋಗ ಕುರಿತು ಜ್ಞಾನ ಪಡೆದರು ಕಾಡಿನ ಹಸಿರಿನಿಂದ ಅವರು ಸದೃಢವಾಗಿ ಬಾಳಿದರು. ಮಗುವೇ ನೀನು ಸದೃಢನಾಗಲು ಯೋಗ ಮಾಡು. ಆಟ ಆಡುತ ನಲಿ. ಪಾಠ ಓದಿ ಜಾಣನಾಗು. ಮರಗಳ ಬೆಳೆಸುತ ನೀನೂ ಬೆಳೆಯುತ ನಾಡನು ಉಳಿಸು. ಗಿಡಮರಗಳು ಇರಲು ಹಸಿರಿನ ಸಿರಿ. ಹಸಿರಿನಿಂದಲೇ ಉಸಿರಿದು ತಿಳಿ.

ಗಿಡಗಳ ರಕ್ಷಿಸಿ ಧಗಧಗಿಸುವ ಬಿಸಿಲನು ಓಡಿಸು. ಹಸಿರಿನ ಅಂತಃಪುರದಲಿ ನೀ ಸುಖವಾಗಿರು.

ಓದು ಮತ್ತು ಬರೆ.

| | | |
|---|---|---|
| ಜ್ಞಾನ | ಋಷಿ | ಸದೃಢ |
| ರಕ್ಷಿಸು | ಧಗಧಗಿಸು | ಸಾಧನೆ |
| ಅಂತಃಪುರ | ಯೋಗ | ಉಳಿಸು |

**ಸೂಚನೆ:** ಕಾಗುಣಿತಗಳ ಸಹಾಯದಿಂದ ಸಂಯುಕ್ತಾಕ್ಷರಗಳ ರಹಿತ ವಾಚನ ಪಾಠ 'ಹಸಿರೇ ಉಸಿರು' ಕೊಡಲಾಗಿದೆ. ಅಕ್ಷರಗಳ ದೃಢೀಕರಣಕ್ಕಾಗಿ ವಾಚನ ಮತ್ತು ಲೇಖನ ಮಾಡಿಸಿಕೊಳ್ಳಿರಿ.

# ಒತ್ತಕ್ಷರ ಪರಿಚಯ



**ಗಟ್ಟಿಯಾಗಿ ಓದು.**

| | | | | |
|---|---|---|---|---|
| ಕ್ಕ | ಖ್ಖ | ಗ್ಗ | ಘ್ಘ | ಙ್ಙ |
| ಚ್ಚ | ಛ್ಛ | ಜ್ಜ | ಝ್ಝ | ಞ್ಞ |
| ಟ್ಟ | ಠ್ಠ | ಡ್ಡ | ಢ್ಢ | ಣ್ಣ |
| ತ್ತ | ಥ್ಥ | ದ್ದ | ಧ್ಧ | ನ್ನ |
| ಪ್ಪ | ಫ್ಫ | ಬ್ಬ | ಭ್ಭ | ಮ್ಮ |
| ಯ್ಯ | ರ್ರ | ಲ್ಲ | ವ್ವ | ಶ್ಶ |
| ಷ್ಷ | ಸ್ಸ | ಹ್ಹ | ಳ್ಳ | |



**ನೇರ ಮೂಲ ಅಕ್ಷರಗಳಿರುವ ಒತ್ತಕ್ಷರಗಳು.**

ಖ್ಖ ಙ್ಙ ಜ್ಜ ಞ್ಞ ಣ್ಣ ಬ್ಬ ವ್ವ



**ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರಗಳು.**

ಕ್ಕ ಗ್ಗ ಘ್ಘ ಚ್ಚ ಛ್ಛ ಜ್ಜ ಝ್ಝ

ಟ್ಟ ಠ್ಠ ಡ್ಡ ಢ್ಢ ಥ್ಥ ದ್ದ ಧ್ಧ

ಪ್ಪ ಫ್ಫ ಭ್ಭ ಶ್ಶ ಷ್ಷ ಸ್ಸ ಹ್ಹ ಳ್ಳ



**ಭಿನ್ನರೂಪದ ಒತ್ತಕ್ಷರಗಳು.**

ತ್ತ ನ್ನ ಮ್ಮ ಯ್ಯ ರ್ರ ಲ್ಲ

**ಸೂಚನೆ:** ಮಕ್ಕಳಿಂದ ಒತ್ತಕ್ಷರಗಳನ್ನು ದೃಢೀಕರಣ ಮಾಡಿಸಿಕೊಳ್ಳಿರಿ.

★ ಚಿತ್ರ ನೋಡಿ ಹೆಸರು ಬರೆ.

ಡ್ಡ



..........................................

..........................................

ಕ್ಕ



..........................................

..........................................

ಚ್ಚ



..........................................

..........................................

ಜ್ಜ



..........................................

..........................................

ಪ್ಪ



..........................................

..........................................

ರ‍್ರ



..........................................

..........................................

**ಸಜಾತೀಯ ಒತ್ತಕ್ಷರಗಳು**

| | | | | | | | | |
|---|---|---|---|---|---|---|---|---|
| ಅಕ್ಕರೆ | ದಬ್ಬನ | ಹಿಗ್ಗು | ಅಚ್ಚರಿ | ಸಪ್ಪಳ | ಮಜ್ಜಿಗೆ | ಬುಟ್ಟಿ | | |
| ಲಡ್ಡು | ಬಣ್ಣ | ಗತ್ತು | ಬೆತ್ತ | ಉದ್ದ | ಕಟ್ಟು | ರನ್ನ | ಸಪ್ಪಳ | ಹಬ್ಬ |
| ಹೆಮ್ಮರ | ಅಯ್ಯ | ಧರ್ಮ | ಸರ‍್ರನೆ | ಬೆಲ್ಲ | ಒಬವ್ವ | ಮನಸ್ಸು | ಕೊಳ್ಳ | |

**ಸೂಚನೆ:** ಮಕ್ಕಳಿಗೆ ಚಿತ್ರಗಳ ಸಹಾಯದಿಂದ ಒತ್ತಕ್ಷರಗಳನ್ನು ಪರಿಚಯಿಸಿರಿ.

## ಓದು ಮತ್ತು ಬರೆ.

# ಒತ್ತಕ್ಷರಗಳು

ತಾ
ತಾ
ತ್ತಾ

ಬರುತ್ತಾನೆ
ಹೋಗುತ್ತಾನೆ
ನೋಡುತ್ತಾನೆ
ಬರುತ್ತಾಳೆ

ನು
ನು
ನ್ನು

ಆಟವನ್ನು
ಜನರನ್ನು
ಗುರುಗಳನ್ನು
ದನಗಳನ್ನು

ದಾ
ದಾ
ದ್ದಾ

ಓದಿದ್ದಾಳೆ
ಬರೆದಿದ್ದಾಳೆ
ಹಾಡಿದ್ದಾನೆ
ನೋಡಿದ್ದಾನೆ

## ಒತ್ತಕ್ಷರಗಳನ್ನು ಉಪಯೋಗಿಸಿ ಶಬ್ದ ತಯಾರಿಸು.

ಕ ಹಿ ಮು ತ ಗೊ ಬ

ಟ್ಟು

ಗು ಸು ಸಿ ಕು ಜು ರ

ಕಟ್ಟು ......................... .........................

......................... .........................

......................... .........................

......................... .........................

**ಸೂಚನೆ:** ಒತ್ತಕ್ಷರಗಳನ್ನು ದೃಢೀಕರಣ ಮಾಡಿಸಿಕೊಳ್ಳಿರಿ. (ತ್ತಾ, ನ್ನು, ದ್ದಾ, ಟ್ಟು)

ಓದು ಮತ್ತು ಬರೆ.

# ವಿಜಾತೀಯ ಒತ್ತಕ್ಷರಗಳು

| | | | | | |
|---|---|---|---|---|---|
| ಅಶ್ವ | ಆತ್ಮ | ಖಡ್ಗ | ರತ್ನ | ಸ್ವರ | ವತ್ಸ |
| ಹಸ್ತ | ಐಕ್ಯ | ಕಾರ್ಯ | ಶಬ್ದ | ವನ್ಯ | ಪರ್ಣ |
| ಭಗ್ನ | ತಾಮ್ರ | ಮುಗ್ಧ | ಸ್ವಪ್ನ | ಕೃತ್ಯ | ಸಂಕಲ್ಪ |
| ಶ್ರಾವಣ | ಪುಷ್ಪ | ವಿಶ್ವಾಸ | ಸ್ಪರ್ಧೆ | ಮುಕ್ತ | |

ಉದಾಹರಣೆಯಂತೆ ಬರೆ.

ಅ
ಹ
ಮ
ಕ
ಸ
— ಗ್ಗ

ಉದಾ: ಅಗ್ಗ

1) ........................................

2) ........................................

3) ........................................

4) ........................................

ಚೆ
ಕ
ಹು
ಗೆ
ಮೆ
— ಲ್ಲ

ಉದಾ: ಚೆಲ್ಲ

1) ........................................

2) ........................................

3) ........................................

4) ........................................

ನ
ಅ
ತ
ಗು
ತಿ
— ಮ್ಮ

ಉದಾ: ಅಮ್ಮ

1) ........................................

2) ........................................

3) ........................................

4) ........................................

**ಸೂಚನೆ:** ಒತ್ತಕ್ಷರಗಳನ್ನು ಮಕ್ಕಳಲ್ಲಿ ದೃಢೀಕರಿಸಿರಿ.

# 18. ಗರಿ ಯಾರದು?

ಸಂಭಾಷಣೆ ಮಾಡು.






**ಸೂಚನೆ:** ಮಕ್ಕಳಿಂದ ಅಭಿನಯ ಮಾಡಿಸಿಕೊಳ್ಳಿರಿ. ಪ್ರತಿಯೊಬ್ಬ ಮಗುವಿಗೆ ಸಂವಾದದಲ್ಲಿ ಸಹಭಾಗ ಆಗಲು ಪ್ರೋತ್ಸಾಹಿಸಿರಿ. ಇಂತಹ ಬೇರೆ ಬೇರೆ ಚಿತ್ರಕಥೆಗಳನ್ನು ಸಂಗ್ರಹಿಸಿ ಮಕ್ಕಳಿಗೆ ಹೇಳಿರಿ.

# 19. ದಿವ್ಯ ಭಾರತ (ಕವಿತೆ)

## ಹಾಡೋಣ.



ಅಂದ ಚಂದಗಳ ನನ್ನಯ ದೇಶ
ಹೊನ್ನ ರನ್ನದ ಭಾರತ ಇದು ನನ್ನಯ ಭಾರತ

ನೋಡಲೆರಡು ಕಣ್ಣು ಸಾಲದು
ಸುಂದರ ಭಾರತ ಇದು ನನ್ನಯ ಭಾರತ

ಹಲವು ಭಾಷೆಗಳ ಹಲವು ಧರ್ಮಗಳ
ಏಕತೆಯ ಭಾರತ ಇದು ನನ್ನಯ ಭಾರತ

ಶೂರ ವೀರರು ಸಾಹಸ ತೋರಿದ
ಹೆಮ್ಮೆಯ ಭಾರತ ಇದು ನನ್ನಯ ಭಾರತ

ಹೇಳಿರಿ ಎಲ್ಲರೂ ಒಟ್ಟಿಗೆ ಸೇರಿ
ಜೈ ಭಾರತ ಜೈ ಜೈ ಭಾರತ

## ಚಿತ್ರ ನೋಡಿ ಹೆಸರು ಬರೆ.

| | | | |
|---|---|---|---|
|  | ............... |  | ............... |
|  | ............... |  | ............... |
|  | ............... |  | ............... |
|  | ............... |  | ............... |

**ಸೂಚನೆ:** ಮಕ್ಕಳಿಂದ ಕವಿತೆಯನ್ನು ಅಭಿನಯದೊಂದಿಗೆ ಹಾಡಿಸಿಕೊಳ್ಳಿರಿ. ಅದೇ ತರಹದ ಕವಿತೆಯ ಸಾಲುಗಳನ್ನು ತಯಾರಿಸಲು ಹುರಿದುಂಬಿಸಿರಿ.

# 20. ಸೂಚನಾ ಪೆಟ್ಟಿಗೆ

**ಸೂಚನೆಗಳನ್ನು ಓದು - ಕೃತಿ ಮಾಡು.**

ಶಿಕ್ಷಕರು ವಿವಿಧ ಕೃತಿಗಳ ಸೂಚನಾ ಪಟ್ಟಿಗಳನ್ನು ತಯಾರಿಸಿ ಪೆಟ್ಟಿಗೆಯಲ್ಲಿ ಹಾಕಬೇಕು. ವಿದ್ಯಾರ್ಥಿ ಪೆಟ್ಟಿಗೆಯಿಂದ ಮಡಚಿದ ಸೂಚನಾ ಕಾಗದವನ್ನು ತೆಗೆಯುತ್ತಾನೆ. ಕಾಗದದ ಮೇಲಿನ ಸೂಚನೆಗಳನ್ನು ಓದುತ್ತಾನೆ. ಇತರ ವಿದ್ಯಾರ್ಥಿಗಳು ಆತ ಸೂಚಿಸಿದ ಪ್ರಕಾರ ಕೃತಿ ಮಾಡುತ್ತಾರೆ.

**ಕಾಗದದ ಮೇಲಿನ ಸೂಚನೆಗಳು**

- ಬೇಗ ಏಳು
- ಹಲ್ಲು ಉಜ್ಜು
- ಜಳಕ ಮಾಡು
- ತಂದೆ ತಾಯಿಗೆ ನಮಿಸು
- ಉಪಹಾರ ಸೇವಿಸು
- ಬಟ್ಟೆ ಧರಿಸು
- ಶಾಲೆಗೆ ಹೋಗು
- ಗುರುಗಳಿಗೆ ನಮಿಸು
- ಪಾಠ ಓದು
- ಬೇಗ ಮಲಗು

★ ಪಾನಕ (ಶರಬತ್ತು) ತಯಾರಿಸಲು ಸೂಚನೆಗಳನ್ನು ಬರೆ.

★ ಬಾಳೆಹಣ್ಣಿನ ಸೀಕರಣೆ ಮಾಡುವ ಕೃತಿ.

★ ಚಹಾ ತಯಾರಿಸುವ ಕೃತಿ.

★ ಹೀಗೆ ಬೇರೆ ಬೇರೆ ಸೂಚನೆಗಳ ಪಟ್ಟಿ ತಯಾರಿಸಬೇಕು. ಮಕ್ಕಳಿಂದ ಕೃತಿ ಮಾಡಿಸಿಕೊಳ್ಳಬೇಕು.














# 21. ಉದ್ಯಾನ




**ವಾಕ್ಯ ಓದಿ ಚಿತ್ರಕ್ಕೆ ಯೋಗ್ಯ ಕ್ರಮ ಕೊಡು.**

1. ಇದರ ಹೆಸರು ಅಜ್ಜ ಅಜ್ಜಿ ಪಾರ್ಕ.
2. ಇಬ್ಬರು ಮಕ್ಕಳು ಜಾರುಬಂಡಿ ಆಡುತ್ತಿದ್ದಾರೆ.
3. ಅಣ್ಣಂದಿರು ಕ್ರಿಕೇಟ್ ಆಡುತ್ತಿದ್ದಾರೆ.
4. ಬೆಂಚ್ ಮೇಲೆ ಇಬ್ಬರು ಅಜ್ಜಿಯರು ಕುಳಿತ್ತಿದ್ದಾರೆ.
5. ಅಜ್ಜಂದಿರು ಜೋರಾಗಿ ನಗುತ್ತಾ ಯೋಗ ಮಾಡುತ್ತಿದ್ದಾರೆ.
6. ಅಲ್ಲಿ ಮಕ್ಕಳು ಕಣ್ಣು-ಮುಚ್ಚಾಲೆ ಆಡುತ್ತಿದ್ದಾರೆ.
7. ಹೂಗಳ ಮೇಲೆ ಚಿಟ್ಟೆಗಳು ಹಾರಾಡುತ್ತಿವೆ.
8. ಗಿಡಗಳ ಮೇಲೆ ಎರಡು ಪಕ್ಷಿಗಳು ಕುಳಿತಿವೆ.
9. ಅಕ್ಕನ ಬಳಿ ನಾಯಿ ಕುಳಿತಿದೆ.
10. ಇಬ್ಬರು ಮಕ್ಕಳು ಗಾಳಿಪಟ ಹಾರಿಸುತ್ತಿದ್ದಾರೆ.
11. ಹೊಂಡದಲ್ಲಿ ಬಣ್ಣ ಬಣ್ಣದ ಕಾರಂಜಿಗಳಿವೆ.
12. ಹೊಂಡದಲ್ಲಿರುವ ನೀರಿನಲ್ಲಿ ಮೀನುಗಳಿವೆ.

**ಸೂಚನೆ:** ಮಕ್ಕಳಿಂದ ಚಿತ್ರ ವಾಚನ ಮಾಡಿಸಿ ಯೋಗ್ಯ ಕ್ರಮ ಕೊಡಲು ಹೇಳಿರಿ.

# ಹೊಂದಿಸು



ಹಕ್ಕಿಗಳು ಕಾಳು ತಿನ್ನುತ್ತಿವೆ.



ಮೊಲ ಮತ್ತು ಮಂಗ ಗಜ್ಜರಿ ತಿನ್ನುತ್ತಿವೆ.



ಇಬ್ಬರು ಮಕ್ಕಳು ಓದುತ್ತಿದ್ದಾರೆ.



ಆಕಾಶದಲ್ಲಿ ವಿಮಾನ ಹಾರುತ್ತಿದೆ.



ಮಕ್ಕಳು ಲಗೋರಿ ಆಡುತ್ತಿದ್ದಾರೆ.



ಅಜ್ಜಿಯು ಕಥೆ ಹೇಳುತ್ತಿದ್ದಾಳೆ.

**ಸೂಚನೆ:** ಮಕ್ಕಳಿಗೆ ಚಿತ್ರ ನಿರೀಕ್ಷಣೆ ಯೋಗ್ಯ ವಾಕ್ಯಕ್ಕೆ ಹೊಂದಿಸಲು ಹೇಳಿರಿ.

# ಊಹಿಸು



ನಾವು **ಜಲ** ಕುಡಿಯುತ್ತೇವೆ.



**ಆಗಸ**ದಲ್ಲಿ ಹಕ್ಕಿಗಳು ಹಾರುತ್ತವೆ.



ರಾತ್ರಿ ಆಕಾಶದಲ್ಲಿ **ಶಶಿ** ಕಾಣುತ್ತಾನೆ.



ಅಮ್ಮ ಹೂದೋಟದಲ್ಲಿಯ **ಕಳೆ** ತೆಗೆಯುತ್ತಿದ್ದಾಳೆ.



ನಾವು **ಸದನ**ದಲ್ಲಿ ವಾಸಿಸುತ್ತೇವೆ.



ನಮ್ಮ ರಾಷ್ಟ್ರೀಯ ಪ್ರಾಣಿ **ವ್ಯಾಘ್ರ** ಆಗಿದೆ.

## ಹೊಂದಿಸು

| | |
|---|---|
| ಜಲ | ಹುಲಿ |
| ಆಗಸ | ಮನೆ |
| ಶಶಿ | ಕಸ |
| ಕಳೆ | ಆಕಾಶ |
| ಸದನ | ಚಂದಿರ |
| ವ್ಯಾಘ್ರ | ನೀರು |

**ಸೂಚನೆ:** ಮಕ್ಕಳಿಗೆ ಪರೋಕ್ಷವಾಗಿ ಸಮನಾರ್ಥಕ ಪದಗಳನ್ನು ಪರಿಚಯಿಸಿರಿ.

# 22. ಚುಕುಬುಕು ರೈಲು



**ಹಾಡೋಣ, ಕುಣಿಯೋಣ.**



ಚುಕುಬುಕು ಚುಕುಬುಕು ಮುಂಬಯಿ ರೈಲು
ಧಡಧಡ ಓಡಿತು ಸಾವಿರ ಮೈಲು
ಪಾಂವ್ ಪಾಂವ್ ಸದ್ದು ಮಾಡುತ ರೈಲು
ಹಳಿಗಳ ಮೇಲೆ ಹೊಡೆಯುತ ಡೌಲು

ದಿನವಿಡಿ ಓಡುವ ನಮ್ಮಯ ರೈಲು
ಮಿಂಚಿನ ವೇಗದಿ ಚಲಿಸೋ ರೈಲು
ಜನಜಂಗುಳಿಯನು ಹತ್ತಿಸಿ ಮೇಲು
ರಭಸದಿ ಸರಕನು ಸಾಗಿಸೊ ರೈಲು

## ಆಟ

**ಶಿಕ್ಷಕರು ಹೇಳಿದಂತೆ ಮಕ್ಕಳು ಸೂಚನೆ ಪಾಲಿಸುವರು.**

**(ಆಕಾಶ, ಭೂಮಿ, ಜಲ, ಮೀನು, ಬೆಟ್ಟ, ಕಮಲ, ನದಿ, ದಡ, ಕುರ್ಚಿ, ಮರ)**

1. ಶಿಕ್ಷಕರು ಆಕಾಶ ಎಂದಾಗ ಮಕ್ಕಳು ಕೈಗಳನ್ನು ಮೇಲೆ ತೋರಿಸಬೇಕು.
2. ಶಿಕ್ಷಕರು ಭೂಮಿ ಎಂದಾಗ ಮಕ್ಕಳು ಭೂಮಿಗೆ ಮುಟ್ಟಬೇಕು.
3. ಶಿಕ್ಷಕರು ಮಳೆ ಎಂದಾಗ ಮಕ್ಕಳು ಮಳೆ ಬರುವ ಹಾಗೆ ಕೃತಿ ಮಾಡಬೇಕು.
4. ಶಿಕ್ಷಕರು ಮೀನು ಎಂದಾಗ ಮಕ್ಕಳು ಕೈಗಳಿಂದ ಮೀನು ಚಲಿಸುವಂತೆ ಕೃತಿ ಮಾಡಬೇಕು.
5. ಶಿಕ್ಷಕರು ಕುರ್ಚಿ ಎಂದಾಗ ಮಕ್ಕಳು ಕುರ್ಚಿಯಲ್ಲಿ ಕುಳಿತಂತೆ ಅರ್ಧ ಕುಳಿತು ಕೈ ಮುಂದೆ ಚಾಚಬೇಕು.
6. ಶಿಕ್ಷಕರು ಮರ ಎಂದಾಗ ಮಕ್ಕಳು ನೇರವಾಗಿ ಕೈಗಳನ್ನು (ಎರಡು) ಮೇಲೆ ಜೋಡಿಸಬೇಕು.
7. ಶಿಕ್ಷಕರು ಕಮಲ ಎಂದಾಗ ಮಕ್ಕಳು ಕೈಗಳನ್ನು ಕಮಲದ ಹೂವಿನಂತೆ ಅರಳಿಸಬೇಕು.
8. ಶಿಕ್ಷಕರು ನದಿ ಎಂದಾಗ ಮಕ್ಕಳು ವರ್ತುಳದಿಂದ ಮುಂದೆ ಜಿಗಿಯಬೇಕು.
9. ಶಿಕ್ಷಕರು ದಡ ಎಂದಾಗ ಮಕ್ಕಳು ವರ್ತುಳದಿಂದ ಹಿಂದೆ ಜಿಗಿಯಬೇಕು.
10. ಶಿಕ್ಷಕರು ಬೆಟ್ಟ ಎಂದಾಗ ಮಕ್ಕಳು ಮೇಲೆ ನೋಡಬೇಕು.

**★ ತಪ್ಪಾಗಿ ಕೃತಿ ಮಾಡಿದ ಮಕ್ಕಳು ಆಟದಿಂದ ಹೊರಗಾಗುತ್ತಾರೆ.**



**ಸೂಚನೆ:**
- ಶಿಶುಗೀತೆ, 'ಚುಕು ಬುಕು ರೈಲು' ಸಾಭಿನಯದೊಂದಿಗೆ ಹಾಡಿಸಿರಿ.
- ಆಟದಲ್ಲಿ ಎಲ್ಲ ಮಕ್ಕಳ ಸಹಭಾಗ ತೆಗೆದುಕೊಂಡು ಆಟ ಆಡಿಸಬೇಕು.

# 23. ಪುಸ್ತಕ ಏಕೆ ಇಷ್ಟವಾಗಿದೆ?



**ಕಥೆ ಓದೋಣ.**



(ಪುಸ್ತಕ ಓದಿದ ವಿದ್ಯಾರ್ಥಿ ಕಥೆ ಏಕೆ ಇಷ್ಟವಾಯಿತು ಎಂಬುದನ್ನು ಹೇಳುತ್ತಿರುವ ಸಂಭಾಷಣೆಯ ಚಿತ್ರ)

ಶಿಕ್ಷಕ – ವಿರಾಟ ಇಲ್ಲಿ ಬಾ. ನೀನು ಯಾವ ಕಥೆ ಪುಸ್ತಕ ಓದಿದೆ?

ವಿರಾಟ – ನಾನು ಪ್ರಾಣಿಗಳ ಕಥೆಯನ್ನು ಓದಿದ್ದೇನೆ.

ಶಿಕ್ಷಕ – ಅದರಲ್ಲಿ, ನಿನಗೆ ಯಾವ ಕಥೆ ಇಷ್ಟವಾಯಿತು?

ವಿರಾಟ – ನನಗೆ ಮೊಲ ಮತ್ತು ಆಮೆಯ ಕಥೆ ಇಷ್ಟವಾಯಿತು.

ಶಿಕ್ಷಕ – ಶಹಭಾಷ! ಈ ಕಥೆ ನಿನಗೇಕೆ ಇಷ್ಟವಾಯಿತು?

ವಿರಾಟ – ಮೊಲ ವೇಗವಾಗಿ ಓಡಿತು, ಮರದ ಕೆಳಗೆ ಮಲಗಿತು. ಆಟದಲ್ಲಿ ಸೋತಿತು. ಆಮೆ ಸತತವಾಗಿ ನಡೆದು ಹೋಗಿ ಗುರಿ ತಲುಪಿತು ಮತ್ತು ಆಟದಲ್ಲಿ ಗೆದ್ದಿತು.

(ಸತತ ಪ್ರಯತ್ನವೇ ಯಶಸ್ಸಿನ ಗುಟ್ಟು ಎಂಬುದು ಸಾಧ್ಯವಾಯಿತು)

**ಸೂಚನೆ:** ಮಕ್ಕಳಲ್ಲಿ ವಾಚನದ ಅಭಿರುಚಿ ಹೆಚ್ಚಿಸಲು ವಿವಿಧ ಕೃತಿ, ಪ್ರಶ್ನೆಗಳ ಮೂಲಕ ಸಂಭಾಷಣೆಯಲ್ಲಿ ಸಹಭಾಗ ತೆಗೆದುಕೊಳ್ಳಿರಿ. ಚಿಕ್ಕ ಚಿಕ್ಕ ವಾಕ್ಯಗಳಿರುವ ಕಥೆ ಪುಸ್ತಕಗಳನ್ನು ಓದಲು ಕೊಡಿ.

# 24. ಚಿತ್ರ ನೋಡಿ ಕಥೆ ಪೂರ್ಣಗೊಳಿಸು




........................................................................

........................................................................

........................................................................

........................................................................




........................................................................

........................................................................

........................................................................

........................................................................



........................................................................

........................................................................

........................................................................

........................................................................



........................................................................

........................................................................

........................................................................

........................................................................

**ಸೂಚನೆ:** ಮಕ್ಕಳಿಗೆ ಚಿತ್ರ ನಿರೀಕ್ಷೆ ಮಾಡಲು ಹೇಳಿರಿ. ಚಿತ್ರಕ್ಕೆ ಸಂಬಂಧಿಸಿದ ವಿವರಣೆಯನ್ನು ಬರೆಯಲು ಸಹಾಯ ಮಾಡಿರಿ ಮತ್ತು ಕಥೆ ಪೂರ್ಣ ಮಾಡಲು ಹೇಳಿರಿ.

# 25. ಜಾಣ ಬಾಲಕರು

## ಓದೋಣ, ಬರೆಯೋಣ.

ಇವರು ಸೋಮು ಮಾಮಾ. ಇವರ ಊರು ಮೈಲಾಪುರ. ಮಾವನ ಮಡದಿಯ ಹೆಸರು ರೋಹಿಣಿ. ಇವರಿಗೆ ಗೌರೀಶ ಎಂಬ ಹುಡುಗ ಭೂಮಿಕಾ ಎಂಬ ಹುಡುಗಿ ಇರುವರು. ಇವರು ದಿನಾಲು ಸರಿಯಾದ ವೇಳೆಗೆ ಶಾಲೆಗೆ ಹೋಗುವರು. ಗೌರೀಶನಿಗೆ ಓದು ಬರಹದ ಗೀಳು.

ಗೌರೀಶ ತಂದೆಯ ಜೊತೆಗೆ ತೋಟದ ಕೆಲಸ ಮಾಡುವನು. ಭೂಮಿಕಾಳಿಗೆ ಸಂಗೀತದ ಒಲವು. ಇವರಿಗೆ ಗುರು ಹಿರಿಯರ ಮೇಲೆ ಅಪಾರ ಗೌರವ. ತಂದೆ ತಾಯಿಯರು ಹೇಳಿದ ಮಾತು ವಿನಯದಿಂದ ಪಾಲಿಸುವರು.



## ಓದು ಬರೆ.

| ಜಾಣ | ಮಾವ | ಮಡದಿ |
|---|---|---|
| | | |
| **ವೇಳೆ** | **ಗೀಳು** | **ತೋಟ** |
| | | |
| **ಗೌರವ** | **ಅಪಾರ** | **ವಿನಯ** |
| | | |
| **ಪಾಲಿಸು** | **ತಂದೆ** | |
| | | |

## ಬಿಟ್ಟ ಸ್ಥಳ ತುಂಬು.

1. ಸೋಮು ಮಾವನ ಊರು ______
2. ಸೋಮು ಮಾವನ ಮಡದಿ ______
3. ಮಕ್ಕಳ ಹೆಸರು ______
4. ಭೂಮಿಕಾಳ ಒಲವು ______

**ಸೂಚನೆ:** ಮಕ್ಕಳಿಗೆ 'ಜಾಣ' ಬಾಲಕರ' ವಾಚನ ಪಾಠ ವಾಚನ ಮತ್ತು ಲೇಖನ ಮಾಡಲು ಪ್ರೋತ್ಸಾಹಿಸಿರಿ. ಸ್ವಂತದ ಅನುಭವ ಬರೆಯಲು ಹೇಳಿರಿ. ಮಕ್ಕಳಿಂದ ಮೂರು-ನಾಲ್ಕು ವರ್ಣಾಕ್ಷರಗಳಿರುವ ಶಬ್ದಗಳನ್ನು ಶ್ರುತಲೇಖನ ಮಾಡಿಸಿಕೊಳ್ಳಿರಿ. ಉದಾ-ಮೈಲಾಪುರ

# 26. ಆರೋಗ್ಯವೇ ಭಾಗ್ಯ

**ಸಂಭಾಷಣೆ ಮಾಡು.**

ಅಮ್ಮ- ವಿನಯ ಎಲ್ಲಿದ್ದೀಯಾ?

ವಿನಯ - ಅಮ್ಮಾ ಇಲ್ಲೇ ಇದ್ದೇನೆ.

ಅಮ್ಮ - ಏನು ಮಾಡುತ್ತಿರುವೆ?

ವಿನಯ - ಮೊಬೈಲ್ ನೋಡುತ್ತಿರುವೆ.

ಅಮ್ಮ - ಮಗು ಮೊಬೈಲ್ ನೋಡುವುದನ್ನು ಬಿಟ್ಟು ಆಡಲು ಹೋಗು.

ವಿನಯ - ಇನ್ನು ಹತ್ತೇ ನಿಮಿಷ ಅಮ್ಮ ............

ಅಮ್ಮ - ಹತ್ತು ನಿಮಿಷ ಎನ್ನುತ್ತಲೇ ಒಂದು ಗಂಟೆಯಾಯಿತು.

ವಿನಯ - ಅಮ್ಮ ದಯವಿಟ್ಟು ................

ಅಮ್ಮ - ಹೀಗೆ ಆದರೆ ನಿನ್ನ ಕಣ್ಣುಗಳ ಆರೋಗ್ಯದ ಗತಿಯೇನು?

ವಿನಯ - ಅಯ್ಯೋ! ಏನೂ ಆಗಲ್ಲಮ್ಮ, ನನ್ನ ಗೆಳೆಯರೂ ಆಡುತ್ತಾರೆ.

ಅಮ್ಮ - ಇದು ಒಳ್ಳೆಯದಲ್ಲ ಕಂದ ಹೊರಗಿನ ಆಟಗಳನ್ನು ಆಡಬೇಕು.

ವಿನಯ - ನಾನು ಮೊಬೈಲನಲ್ಲಿಯೇ ಆಟ ಆಡುವೆ.

ಅಮ್ಮ - ಮೊಬೈಲನಲ್ಲಿಯೇ ಆಡುತ್ತಿದ್ದರೆ ಕಣ್ಣುಗಳು ಹಾಳಾಗುತ್ತವೆ.

ವಿನಯ - ಹೌದೇನು ಅಮ್ಮ?

ಅಮ್ಮ - ನಿನ್ನ ಕಣ್ಣಿಗೆ ಕನ್ನಡಕ ಬರುವುದು.

ವಿನಯ - ನಿಜವೇ ಅಮ್ಮ?

ಅಮ್ಮ - ಹೌದು ಮಗು, ಮೊಬೈಲಿನ ಅತಿಯಾದ ಬಳಕೆ ಕಣ್ಣಿಗೆ ಹಾನಿಕರ.

ವಿನಯ - ಹಾಗಾದರೆ ನಾನು ಈಗ ಏನು ಮಾಡಲಿ?

ಅಮ್ಮ - ಪುಸ್ತಕ ಓದು ಇಲ್ಲವೇ ಗೆಳೆಯರೊಂದಿಗೆ ಆಟವಾಡು.

ವಿನಯ - ಆಗ ಏನಾಗುವುದು?

ಅಮ್ಮ - ಆಗ ನೀನು ಜಾಣ ಮತ್ತು ಸದೃಢನಾಗುವೆ.

ವಿನಯ - ಸರಿ ಅಮ್ಮ, ನಾನು ಗೆಳೆಯರೊಂದಿಗೆ ಆಟ ಆಡುತ್ತೇನೆ.

ಅಮ್ಮ - ಭೇಷ ............ ! ನೀನು ಜಾಣ ಮಗು



**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

1. ಯಾರ – ಯಾರ ನಡುವೆ ಸಂಭಾಷಣೆ ನಡೆದಿದೆ?

   ..........................................................................................

2. ವಿನಯ ಏನು ಮಾಡುತ್ತಿದ್ದನು?

   ..........................................................................................

3. ವಿನಯನು ಎಷ್ಟು ಗಂಟೆಯಿಂದ ಮೊಬೈಲ್ ನೋಡುತ್ತಿದ್ದನು?

   ..........................................................................................

4. ಮೊಬೈಲಿನ ಅತೀ ಬಳಕೆಯಿಂದ ಏನಾಗುವುದು?

   ..........................................................................................

5. ವಿನಯನು ಯಾರೊಂದಿಗೆ ಆಟ ಆಡಲು ಹೋದನು?

   ..........................................................................................

## ಚಂದಮಾಮ

**ಬಿಟ್ಟಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆದು ಕವಿತೆಯ ಸಾಲುಗಳನ್ನು ಪೂರ್ಣಗೊಳಿಸು.**

ಚಂದಮಾಮಾ ಚಂದಮಾಮಾ
ಏನು ಮಾಡುತಿರುವೆ ನೀನು?
ನಾನು ಊಟ ಮಾಡುತಿಹೆನು
ನೀನು ಊಟ ಮಾಡುವೆಯಾ?

ಚಂದಮಾಮಾ ಚಂದಮಾಮಾ
ಏನು ಮಾಡುತಿರುವೆ ನೀನು?
ನಾನು ಪಾಠ ಓದುತಿಹೆನು
ನೀನು------------?

ಚಂದಮಾಮಾ ಚಂದಮಾಮಾ
ಏನು ಮಾಡುತಿರುವೆ ನೀನು?
ನಾನು ಆಟ ಆಡುತಿಹೆನು
ನೀನು ------------?

ಚಂದಮಾಮಾ ಚಂದಮಾಮಾ
ಏನು ಮಾಡುತಿರುವೆ ನೀನು?
ನಾನು ಕವಿತೆ ಬರೆಯುತಿಹೆನು
ನೀನು------------?



**ಸೂಚನೆ:** ಮಕ್ಕಳನ್ನು ಸಂವಾದದಲ್ಲಿ ಸಹಭಾಗ ಆಗಲು ಪ್ರೋತ್ಸಾಹಿಸಿರಿ. ವಾಚನದ ರೂಢಿ ಮಾಡಿಸಿಕೊಳ್ಳಿರಿ. ಕವಿತೆಯನ್ನು ಮಕ್ಕಳೊಂದಿಗೆ ಓದಿರಿ. ಯೋಗ್ಯ ಶಬ್ದ ಬರೆಯಲು ಸಹಾಯ ಮಾಡಿರಿ.

ಪ್ರಿಯ ವಿದ್ಯಾರ್ಥಿ ಗೆಳೆಯರೆ ಮತ್ತು ಗೆಳತಿಯರೆ,

ಒಂದು ವೇಳೆ ನಿಮ್ಮನ್ನು ಯಾರಾದರೂ ಅಯೋಗ್ಯ ರೀತಿಯಿಂದ ಸ್ಪರ್ಶ ಮಾಡಿದುದರಿಂದ ನೀವು ಅಸ್ವಸ್ಥರಾಗಿದ್ದರೆ, ಆಗ ನೀವು ಸುಮ್ಮನೆ ಕುಳಿತುಕೊಳ್ಳಬೇಡಿರಿ. ಇಂಥ ಘಟನೆಗಳು ನಡೆದರೆ, ನೀವು ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅದರಂತೆ ಮಾಡುವುದು ಅವಶ್ಯಕವಾಗಿದೆ.

1. ಸ್ವತಃ ದೂಷಿಸಿಕೊಳ್ಳಬೇಡಿರಿ.
2. ನಿಮಗೆ ಯಾರ ಮೇಲೆ ವಿಶ್ವಾಸವಿದೆಯೋ, ಅವರಿಗೆ ನಡೆದ ಘಟನೆಯ ಬಗ್ಗೆ ಹೇಳಿರಿ.
3. ನೀವು POCSO e-box ಮೂಲಕ ನಿಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಸ್ಥಾಪಿಸಲಾದ ರಾಷ್ಟ್ರೀಯ ಆಯೋಗಕ್ಕೆ (NCPCR) ಸಹ ತಿಳಸಬಹುದು.

**ಯಾವಾಗ ನಿಮಗೆ ಯಾರಾದರೂ ಅಯೋಗ್ಯ ರೀತಿಯಿಂದ ಸ್ಪರ್ಶ ಮಾಡುವರೋ, ಆಗ ನಿಮಗೆ ವಿಚಿತ್ರವೆನಿಸಬಹುದು, ನೀವು ಗೊಂದಲದಲ್ಲಿ ಹೋಗಬಹುದು, ನಿಮಗೆ ಅಸಹಾಯಕವೆನಿಸಬಹುದು; ಆದರೆ ನಿಮಗೆ 'ವಿಚಿತ್ರವೆನಿಸುವ' ಯಾವುದೇ ಕಾರಣವಿಲ್ಲ, ಏಕೆಂದರೆ ಅದರಲ್ಲಿ ನಿಮ್ಮದೇನು ದೋಷ ಇರುವದಿಲ್ಲ.**




**ಈ ಬಟನ್ನು ಒತ್ತಿರಿ.**

POCSO ಇದು e-box ncpcr@gov.in ಈ ವೆಬ್‌ಸೈಟ್‌ನಲ್ಲಿ ಉಪಲಬ್ಧವಿದೆ.

**ಒಂದು ವೇಳೆ ನಿಮ್ಮ ವಯಸ್ಸು ೧೮ ವರ್ಷಕ್ಕಿಂತ ಕಡಿಮೆ ಇದ್ದರೆ. ನಿಮಗೆ ಯಾರಾದರೂ ತೊಂದರೆ ಕೊಟ್ಟಿದ್ದರೆ ಮತ್ತು ನೀವು ಗೊಂದಲದಲ್ಲಿ ಸಿಲುಕಿದ್ದರೆ, ಪೀಡಿತರಾಗಿದ್ದರೆ, ಉದ್ವೇಗದಲ್ಲಿ ಇದ್ದರೆ ಅಥವಾ ಇಂಥ ರೀತಿಯ ತೊಂದರೆ ಸಹನ ಮಾಡಿಕೊಳ್ಳುವ ಯಾವುದೇ ಮಕ್ಕಳು ನಿಮ್ಮ ಮಾಹಿತಿಯಲ್ಲಿ ಇದ್ದರೆ, ಹಾಗಾದರೆ ೧೦೯೮ (ಹತ್ತು ಒಂಬತ್ತು ಎಂಟು) ಕ್ಕೆ ಸಂಪರ್ಕಿಸಿರಿ. ಅದರಿಂದ ನಮ್ಮ ಹಾಗೂ ಗೆಳೆಯರ ಜೀವನವೇ ಬದಲಾಗಬಹುದು.**

CHILD LINE
1098
NIGHT & DAY

**ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲ್ ಫ್ರೀ ರಾಷ್ಟ್ರೀಯ ಆಪತ್ಕಾಲದ ಫೋನ್ ಸೇವೆಯಾಗಿದೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಪತ್ಕಾಲ ಸಚಿವಾಲಯದ ಮುಖಾಂತರ, ಪೀಡಿತ ಮಕ್ಕಳ ಸಲುಗಾಗಿ ಜಾರಿಗೆ ತರಲಾಗುವ, ಚೈಲ್ಡ್‌ಲೈನ್ ಫೌಂಡೇಶನ್ ಇದು ಆರಂಭಿಸಿರುವ ಒಂದು ಉಪಕ್ರಮವಾಗಿದೆ.**

नए समाज की ओर
Towards a new dawn

**''ವಿದ್ಯಾರ್ಥಿಗಳಿಗೆ ಯೊಗ್ಯಸ್ಪರ್ಶ - ಅಯೊಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ''**

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

बालभारती इयत्ता पहिली (कन्नड)

₹ 61.00